# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್ — ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಶುಕ್ರವಾರ, ಜನವರಿ 24, 2025, ಸಂಪುಟ : 51 ಸಂಚಿಕೆ : 252 ☎ 08192-254736 91642 99999

RNI No: 27369 ಪುಟ : 6 ರೂ : 5.00 www.janathavani.com janathavani@mac.com


## ತಾ. ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಶಿವಾನಂದ ಗುರೂಜಿ



ದಾವಣಗೆರೆ, ಜ. 23 - ಇದೇ ಫೆ. 1 ರಂದು ಕುವೆಂಪು ಕನ್ನಡ ಭವನದಲ್ಲಿ ನಡೆಯಲಿರುವದಾವಣಗೆರೆ11ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

ಕುವೆಂಪು ಕನ್ನಡ ಭವನದಲ್ಲಿ ದಾವಣಗೆರೆ (2ನೇ ಪುಟಕ್ಕೆ)

## ವೀರಶೈವ-ಲಿಂಗಾಯತ ಮಹಾಸಭಾಕ್ಕೆ ಪದಾಧಿಕಾರಿಗಳ ಆಯ್ಕೆ





ದಾವಣಗೆರೆ, ಜ. 23- ಅಖಿಲ ಭಾರತ ವೀರಶೈವ ಮಹಾಸಭಾದ ನೂತನ ಪದಾಧಿಕಾರಿಗಳನ್ನು ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಅವರು ಆಯ್ಕೆ ಮಾಡಿದ್ದಾರೆ.

(2ನೇ ಪುಟಕ್ಕೆ)


## ನಾಲ್ಕನೇ ವರ್ಷದ ಪುಣ್ಯಸ್ಮರಣೆ



### ಶ್ರೀಮತಿ ವೇದಾ ಮಂಜುನಾಥ್

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ನಿಮಗೆ ಪರಮಾತ್ಮನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ,
ಸದಾ ನಿಮ್ಮ ನೆನಪಿನಲ್ಲಿರುವ

**ದುಃಖತಪ್ತರು :**

ಆರ್.ಎಸ್. ಚನ್ನಬಸಪ್ಪ
ಶ್ರೀಮತಿ ಸರೋಜ ಮತ್ತು ಕುಟುಂಬದವರು,
ಮಗಳು : C A ಇಂಚನ
ತರಳಬಾಳು ಬಡಾವಣೆ, ದಾವಣಗೆರೆ.

## ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ


### ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ – 2025

ಮಾನ್ಯ ಬಂಧುಗಳೇ,

ದಿನಾಂಕ 24-01-2025ನೇ ಶುಕ್ರವಾರದಂದು ನಡೆಯಲಿರುವ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ನಾವುಗಳು ಅಭ್ಯರ್ಥಿಗಳಾಗಿ ಸ್ಪರ್ಧಿಸಿರುತ್ತೇವೆ. ತಾವುಗಳು ತಮ್ಮ ಅತ್ಯಮೂಲ್ಯವಾದ ಮತಗಳನ್ನು ನೀಡುವುದರ ಮೂಲಕ ಎಲ್ಲಾ 8 (ಎಂಟು) ಅಭ್ಯರ್ಥಿಗಳನ್ನು ಅತ್ಯಂತ ಬಹುಮತದಿಂದ ಜಯಶೀಲರನ್ನಾಗಿ ಮಾಡಬೇಕಾಗಿ ತಮ್ಮಲ್ಲಿ ಸವಿನಯ ಪ್ರಾರ್ಥನೆ.

**ಮಾದರಿ ಮತ ಪತ್ರ**

**ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆ 07 ಸಾಮಾನ್ಯ ಕ್ಷೇತ್ರಕ್ಕೆ**

| ಕ್ರ.ಸಂ. | | ಅಭ್ಯರ್ಥಿಯ ಹೆಸರು | ಚಿಹ್ನೆ | |
|---|---|---|---|---|
| 1 |  | ಕೆ.ಬಿ. ನಾಗರಾಜ್ |  | ✠ |
| 2 |  | ಪ್ರಕಾಶ್ ವಿ. |  | ✠ |
| 3 |  | ಬ್ರಹ್ಮಾನಂದ ರೆಡ್ಡಿ ಡಿ. |  | ✠ |
| 4 | | | | |
| 5 |  | ಯೋಗಿ ರೆಡ್ಡಿ ಬಿ. |  | ✠ |
| 6 |  | ವೆಂಕಟ ರೆಡ್ಡಿ ಆರ್. |  | ✠ |
| 7 |  | ಬಿ. ವೆಂಕಟೇಶ್ವರ ರೆಡ್ಡಿ ಬಿನ್ ನರಸಾ ರೆಡ್ಡಿ |  | ✠ |
| 8 |  | ಬಿ. ವೆಂಕಟೇಶ್ವರ ರೆಡ್ಡಿ ಬಿನ್ ಬಿ. ವೆಂಕಟ ರೆಡ್ಡಿ |  | ✠ |
| 9 | | | | |

**ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆ 01 ಹಿಂದುಳಿದ ವರ್ಗ ಪ್ರವರ್ಗ 'ಎ' ಮೀಸಲು ಕ್ಷೇತ್ರಕ್ಕೆ**

| ಕ್ರ.ಸಂ. | | ಅಭ್ಯರ್ಥಿಯ ಹೆಸರು | ಚಿಹ್ನೆ | |
|---|---|---|---|---|
| 1 |  | ಆನಂದ ಎನ್. |  | ✠ |
| 2 | | | | |

ಮತದಾನ ದಿನಾಂಕ : 24-01-2025ನೇ ಶುಕ್ರವಾರ
ಮತದಾನದ ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 4-00ರ ವರೆಗೆ
ಸ್ಥಳ : ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ, 16ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೆ.ಟಿ.ಜೆ. ನಗರ, ದಾವಣಗೆರೆ.


ಈ ಮೇಲ್ಕಂಡ 8 ಗುರುತುಗಳಿಗೆ ತಮ್ಮ ಅಮೂಲ್ಯವಾದ ಮತಗಳನ್ನು ನೀಡುವುದರ ಮೂಲಕ ನಮ್ಮನ್ನು ಜಯಶೀಲರನ್ನಾಗಿ ಮಾಡಬೇಕಾಗಿ ಪ್ರಾರ್ಥನೆ.

ವಿಶೇಷ ಸೂಚನೆ : ಸೊಸೈಟಿಯ ಗುರುತಿನ ಚೀಟಿ (Identity Card) ಯನ್ನು ತಪ್ಪದೇ ತರಬೇಕಾಗಿ ವಿನಂತಿ.

॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥




## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿಲ್ಲೆ ಹರಿಹರ ತಾ॥ ಕೊಮಾರನಹಳ್ಳಿ ಗ್ರಾಮದ ವಾಸಿ

### ಶ್ರೀ ಕಲ್ಲಪ್ಪರ ಸುರೇಶ್ ಮತ್ತು ಸಹೋದರರು

ಮಾಡುವ ವಿಜ್ಞಾಪನೆಗಳು.

ದಿನಾಂಕ : 16.01.2025ನೇ ಗುರುವಾರ ರಾತ್ರಿ 10.20ಕ್ಕೆ ನಮ್ಮ ಪೂಜ್ಯ ತಂದೆಯವರಾದ

### ಶರಣ ಶ್ರೀ ಕಲ್ಲಪ್ಪರ ಕರಿಬಸಪ್ಪ

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

"ಕೈಲಾಸ ಶಿವಗಣಾರಾಧನೆ"ಯನ್ನು

ದಿನಾಂಕ : 24.01.2025ನೇ ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ಹರಿಹರ ತಾಲ್ಲೂಕು ಕೊಮಾರನಹಳ್ಳಿ ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀರಂಗನಾಥ ಸಮುದಾಯ ಭವನ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಬಯಸುವ.

**ದುಃಖತಪ್ತರು :**

- ಮೃತರ ಧರ್ಮಪತ್ನಿ : ಶ್ರೀಮತಿ ರಿಂದಮ್ಮ, ಕೊಮಾರನಹಳ್ಳಿ
- ಮಕ್ಕಳಾದ : ಲಿಂ. ಶ್ರೀಮತಿ ಮಮತ ಶ್ರೀ ಕೆ. ಸುರೇಶ್, ಕೊಮಾರನಹಳ್ಳಿ
- ಶ್ರೀಮತಿ ಮಂಜುಳ ಶ್ರೀ ಲಿಂ. ಕೆ. ರಂಗನಾಥ ಮತ್ತು ಮಕ್ಕಳು, ಕೊಮಾರನಹಳ್ಳಿ
- ಶ್ರೀಮತಿ ಶಶಿಕಲಾ ಶ್ರೀ ಕೆ. ಬಸವರಾಜ್ ಮತ್ತು ಮಕ್ಕಳು, ಕೊಮಾರನಹಳ್ಳಿ
- ಶ್ರೀಮತಿ ಅಕ್ಕಮ್ಮ ಕೋಂ ಲಿಂ. ಶ್ರೀ ಮಿಠಾಯಿ ಬಸವರಾಜಪ್ಪ ಮತ್ತು ಮಕ್ಕಳು, ಹರಿಹರ
- ಶ್ರೀಮತಿ ಗೀತಮ್ಮ ಶ್ರೀ ಡಿ. ಹೇಮಂತ್‌ರಾಜ್ ಮತ್ತು ಸಹೋದರರು, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮಿಠಾಯಿ ವಂಶಸ್ಥರು, ಹರಿಹರ
- ಶ್ರೀಮತಿ ಪುಷ್ಪ ಶ್ರೀ ಕೆ. ಮಂಜುನಾಥ ಮತ್ತು ಮಕ್ಕಳು, ಕೊಮಾರನಹಳ್ಳಿ
- ಶ್ರೀಮತಿ ಸರಿತಾ ಶ್ರೀ ಕೆ. ಉಜ್ಜೇಶ್ ಮತ್ತು ಮಕ್ಕಳು, ಕೊಮಾರನಹಳ್ಳಿ
- ಶ್ರೀಮತಿ ವಿಶಾಲಾಕ್ಷಿ ಶ್ರೀ ಜಿ. ಮಂಜುನಾಥ್ ಪಟೇಲ್ ಮತ್ತು ಸಹೋದರರು, ಮಕ್ಕಳು, ಕೊಮಾರನಹಳ್ಳಿ
- ಶ್ರೀಮತಿ ಮಹಾದೇವಮ್ಮ ಪಾಲ್ದಾರ ಶಿವನಗೌಡ್ರು ಮತ್ತು ಮಕ್ಕಳು, ತರಗನಹಳ್ಳಿ
- ಶ್ರೀಮತಿ ಗಂಗಮ್ಮ, ಲಿಂ. ಶ್ರೀಮತಿ ಶಾಂತಮ್ಮ ಶ್ರೀ ಹನುಮಂತಪ್ಪ ಮತ್ತು ಮಕ್ಕಳು, ಹರಮಘಟ್ಟ
- ಲಿಂ. ಶ್ರೀಮತಿ ನಾಗರತ್ನಮ್ಮ ಲಿಂ. ಶ್ರೀ ಗೌಡ್ರ ಈಶ್ವರಪ್ಪ ಮತ್ತು ಮಕ್ಕಳು, ಹಾರ್ನಳ್ಳಿ
- ಶ್ರೀಮತಿ ಗಿರಿಜಮ್ಮ ಲಿಂ. ಶ್ರೀ ಗಂಜಿನಹಳ್ಳಿ ನಾಗರಾಜಪ್ಪ ಮತ್ತು ಮಕ್ಕಳು, ನ್ಯಾಮತಿ
- ಲಿಂ. ಶ್ರೀಮತಿ ರತ್ನಮ್ಮ ಲಿಂ. ಶ್ರೀ ನೀಲಕಂಠಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಮರಬನಹಳ್ಳಿ
- ಲಿಂ. ಶ್ರೀಮತಿ ಬಸಮ್ಮ ಶ್ರೀ ತಳಸದ ರೇವಣಸಿದ್ದಪ್ಪ ಮತ್ತು ಮಕ್ಕಳು, ಮಲೇಬೆನ್ನೂರು
- ಲಿಂ. ಶ್ರೀಮತಿ ಗಿರಿಜಮ್ಮ ಲಿಂ. ಶ್ರೀ ಕೋಟೆಪ್ಪರ ಕಲ್ಲಪ್ಪ ಮತ್ತು ಮಕ್ಕಳು, ಹಳೇಬಾತಿ
- ಲಿಂ. ಶ್ರೀಮತಿ ಸಿದ್ದಮ್ಮ ಲಿಂ. ಶ್ರೀ ಹೆಚ್.ಜಿ. ಗುರುಸಿದ್ದಪ್ಪ ಮತ್ತು ಬಿಳಸನೂರು ವಂಶಸ್ಥರು, ಮಲೇಬೆನ್ನೂರು
- ಶ್ರೀಮತಿ ಸುನಂದ ಶ್ರೀ ಹುಗ್ಗೇರ ರಂಗನಾಥ್ ಮತ್ತು ಸಹೋದರರು, ಮಕ್ಕಳು, ಕೊಮಾರನಹಳ್ಳಿ

**ಕೊಮಾರನಹಳ್ಳಿ ಗ್ರಾಮಸ್ಥರು ಮತ್ತು ಬಂಧು-ಮಿತ್ರರು / ಶ್ರೀ ಸಿದ್ದೇಶ್ವರ ಸ್ಟೋರ್ಸ್, ಮಲೇಬೆನ್ನೂರು.**

ವಿ.ಸೂ. : ಆತ್ಮೀಯರೇ ಆಹ್ವಾನ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಎಐಡಿಎಸ್‌ಓನಿಂದ ನೇತಾಜಿ ಜನ್ಮದಿನಾಚರಣೆ



ದಾವಣಗೆರೆ, ಜ. 23- ಎಐಡಿಎಸ್‌ಓ ದಾವಣಗೆರೆ ಜಿಲ್ಲಾ ಸಮಿತಿ ವತಿಯಿಂದ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಕ್ರಾಂತಿಕಾರಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 128ನೇ ಜನ್ಮದಿನ ಆಚರಿಸಲಾಯಿತು.

ನಗರದ ಯು.ಬಿ.ಡಿ.ಟಿ ಇಂಜಿನಿಯರಿಂಗ್ ಕಾಲೇಜು, ಜೆ.ಐ.ಟಿ ಪಾಲಿಟೆಕ್ನಿಕ್, ಡಿ.ಆರ್.ಎಂ. ಪದವಿ ಪೂರ್ವ ಕಾಲೇಜು ,ರಾಜನಹಳ್ಳಿ ಸೀತಮ್ಮ ಬಾಲಕಿಯರ ಶಾಲೆ ಮತ್ತು ಪದವಿ ಪೂರ್ವ ಕಾಲೇಜು, ಎ.ಆರ್.ಜಿ ಪಿಯು, ಬಂಕಾಪುರ ನಂಜುಂಡಪ್ಪ ಹಿರಿಯ ಪ್ರಾಥಮಿಕ ಶಾಲೆ ಹೀಗೆ ಸರಕಾರಿ, ಅನುದಾನಿತ ಮತ್ತು ಖಾಸಗಿ ಶಾಲಾ ಕಾಲೇಜುಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಾದ ಮೈದಾನದಲ್ಲಿ, ಬಸಾಪುರ ಗ್ರಾಮದಲ್ಲಿ, ವಿವಿಧ ಬಾಲಕರ ಹಾಗೂ ಬಾಲಕಿಯರ ವಸತಿ ನಿಲಯಗಳ ನೇತಾಜಿಯವರಿಗೆ ಗೌರವ ನಮನ ಸಲ್ಲಿಸುವ ಕಾರ್ಯಕ್ರಮ ಅತ್ಯಂತ ಸ್ಫೂರ್ತಿದಾಯಕವಾಗಿ ನಡೆಯಿತು. ವಿದ್ಯಾರ್ಥಿಗಳಲ್ಲಿ ಉನ್ನತ ನೀತಿ-ನೈತಿಕತೆ-ಸಂಸ್ಕೃತಿಯನ್ನು ಬೆಳೆಸುವುದು ಮತ್ತು ಒಳ್ಳೆಯ ಗುಣಗಳನ್ನು ಹೊಂದಿರುವ ನೇತಾಜಿ ಅವರ ವಿಚಾರಗಳನ್ನು, ಆದರ್ಶಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು ಎಂಬ ಕೂಗು ಎಲ್ಲೆಡೆ ಸಾರಲಾಯಿತು.

ಪ್ರಸಕ್ತ ಸಾಮಾಜಿಕ ವ್ಯವಸ್ಥೆಯಲ್ಲಿ ಶಿಕ್ಷಣ ಖಾಸಗೀಕರಣ, ನಿರುದ್ಯೋಗ ಮತ್ತು ಹೆಚ್ಚುತ್ತಿರುವ ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ, ಅತ್ಯಾಚಾರ ಪ್ರಕರಣಗಳು ಇವೆಲ್ಲವೂ ಕೊನೆಯಾಗಬೇಕು. ಸಾಮಾಜಿಕ ವಾತಾವರಣವು ಕೆಟ್ಟ ಕೆಟ್ಟ ಸಿನಿಮಾ, ಅಶ್ಲೀಲತೆ ಇವುಗಳಿಂದ ಇವತ್ತಿನ ವಿದ್ಯಾರ್ಥಿಗಳ ಮನಸ್ಸು ಹಾಳಾಗುತ್ತಿದೆ ಹಾಗೂ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಆದ್ದರಿಂದ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯು ವಿದ್ಯಾರ್ಥಿಗಳಲ್ಲಿ ಶಿಕ್ಷಣ – ಮಾನವತೆ – ಸಂಸ್ಕೃತಿ ಉಳಿಸಲು ಕರೆ ಕೊಡಲಾಯಿತು.

ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯರು, ಶಿಕ್ಷಕರು, ಪೋಷಕರು, ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ನೇತಾಜಿ ಅವರಿಗೆ ತಮ್ಮ ನಮನಗಳನ್ನು ಸಲ್ಲಿಸುತ್ತಾ, ಈ ಘೋಷಣೆಗಳ ಜೊತೆಗೆ ನಿಂತರು.

# ನೇತಾಜಿ ಆದರ್ಶ ಯುವಕರಿಗೆ ಮಾದರಿ : ದಿನೇಶ್ ಕೆ. ಶೆಟ್ಟಿ

ದಾವಣಗೆರೆ, ಜ. 23 - ನಗರದ ರಾಮ್ ಅಂಡ್ ಕೋ ಸರ್ಕಲ್‌ನಲ್ಲಿ ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 128ನೇ ಜನ್ಮದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ದಿನೇಶ್ ಕೆ. ಶೆಟ್ಟಿ ಮಾತನಾಡಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಆದರ್ಶಗಳು ಯುವಕರಿಗೆ ಮಾದರಿ ಅವರು ಮಹಾತ್ಮಾ ಗಾಂಧಿ ನೇತೃತ್ವದ ರಾಷ್ಟ್ರೀಯತಾವಾದಿ ಚಳುವಳಿ, ಜವಾಹರಲಾಲ್ ನೆಹರು ಅವರ ನಂತರ ಅವರು ಕಾಂಗ್ರೆಸ್‌ನೊಳಗಿನ ಒಂದು ಗುಂಪಿನಲ್ಲಿ ನಾಯಕತ್ವ ವಹಿಸಿಕೊಂಡಿದ್ದರು. ಬೋಸ್ 1938 ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು ಎಂದು ದಿನೇಶ್ ಶೆಟ್ಟಿ ತಿಳಿಸಿದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್, ಡಾ. ಆಲೂರ್ ಮಂಜುನಾಥ್, ಮಾಜಿ ಸದಸ್ಯ ಡಿ.ಎನ್. ಜಗದೀಶ್, ಕೇರಂ ಗಣೇಶ್, ಪ್ರಸನ್ನಕುಮಾರ್, ಹನುಮಂತಪ್ಪ, ಪರಶುರಾಮ್, ಚೇತನ್, ಗೋಪಾಲ್, ಪ್ರವೀಣ್, ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



# ಸಮ್ಮೇಳನದ ಸರ್ವಾಧ್ಯಕ್ಷರಾಗಿ ಶಿವಾನಂದ ಗುರೂಜಿ

**(1ನೇ ಪುಟದಿಂದ)** ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಇವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ತಾಲ್ಲೂಕು ಕಸಾಪ ಕಾರ್ಯಕಾರಿಣಿ ಸಮಿತಿ ಸಭೆಯಲ್ಲಿ ಚರ್ಚಿಸಿ ಸರ್ವಾನುಮತದಿಂದ ಸಾಹಿತಿಗಳು ಮತ್ತು ಅಧ್ಯಾತ್ಮಿಕ ಚಿಂತಕರೂ ಆದ ಶ್ರೀ ಶಿವಾನಂದ ಗುರೂಜಿಯವರನ್ನು ಆಯ್ಕೆ ಮಾಡಲಾಯಿತು ಎಂದು ತಾಲ್ಲೂಕು ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ತಿಳಿಸಿದ್ದಾರೆ.

ಗುರೂಜಿ ಅವರು ಅನಾಥ ಸೇವಾ ಬಸವ ಗುರು ಕುಲವೆಂಬ ಜಂಗಮ ಸಂಸ್ಥೆ ಯೊಂದಿಗೆ ಕರ್ನಾಟಕದ ಗ್ರಾಮಾಂತರ ಪ್ರದೇಶ ಗಳಲ್ಲಿ ಯೋಗಾಸನ ಶಿಬಿರ ನಡೆಸುವುದರೊಂದಿಗೆ, ವಚನ ಸಾಹಿತ್ಯದ ಪ್ರವಚನಗೈದಿದ್ದಾರೆ. ನಂತರ ಶ್ರೀ ಬಸವ ಗುರುಕುಲ ವಿಶ್ವಸ್ಥ ಸಮಿತಿ ಸ್ಥಾಪಿಸಿ ಅದರ ಸಂಸ್ಥಾಪಕ ಅಧ್ಯಕ್ಷರಾಗಿ ಸುಮಾರು 27 ವರ್ಷಗಳ ಸೇವೆ ಸಲ್ಲಿಸಿದ್ದಾರೆ. ವೈಚಾರಿಕ ಹಿನ್ನೆಲೆಯಲ್ಲಿ ಬಸವ ಗುರುಕುಲದಿಂದ ನಿರ್ಗಮಿಸಿ ಸ್ವತಂತ್ರವಾಗಿ ಶ್ರೀ ಬಸವ ಗುರು ತಪೋವನವನ್ನು ಶಿರಮಗೊಂಡನಹಳ್ಳಿ ಯಲ್ಲಿ ಸ್ಥಾಪಿಸಿದ್ದು, ಅದು 'ಶರಣೆ ಅಕ್ಕಮಹಾದೇವಿ ಮಕ್ಕಳ ಕಮ್ಮಟ' ಕ್ಕೆ ನಾಂದಿಯಾಗಿದೆ.

ಶರಣ ಶಿವಾನಂದ ಗುರೂಜಿ ಅವರು ನಿಷ್ಠೂರವಾದಿಗಳು, ನ್ಯಾಯಪರರು ಮತ್ತು ತತ್ವ ನಿಷ್ಠರು. ಸದಾ ಹೊಸ ವೈಚಾರಿಕ ಚಿಂತನೆಗಳಿಗೆ ಚಾಲನೆ ನೀಡುವಂತವರಾಗಿದ್ದಾರೆ. ತಮ್ಮ ಸ್ವಂತ ಬದುಕಿಗಿಂತ ಇತರರ ಬದುಕಿನತ್ತ ನೋಡುವುದು, ಮರುಗುವುದು, ಮರುಗಿ ಕಾರ್ಯಪ್ರವೃತ್ತರಾಗು ವುದು ಅವರ ಸಹಜ ಸ್ವಭಾವವಾಗಿದೆ. ಶ್ರೀಗಳು ಸ್ಥಳೀಯ ಪತ್ರಿಕೆಯ ಅಂಕಣಕಾರರಾಗಿ ಹಲವು ಚಿಂತನ ಲೇಖನಗಳನ್ನು ಪ್ರಕಟಿಸುತ್ತಿದ್ದಾರೆ. ಅಲ್ಲದೆ 'ಹಂಸಯೋಗಿ ಕಾವ್ಯನಾಮ'ದಿಂದ ನೂರಾರು ವಚನಗಳನ್ನು ರಚಿಸಿದ್ದಾರೆ. ಇದಲ್ಲದೆ ಸಾಹಿತ್ಯ ಕೃಷಿಯಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಶ್ರೀಗಳು ಮಾತೃ ಹೃದಯಿ ಬಸವಣ್ಣ (ಬಹುಮಾನಿತ ಪ್ರಬಂಧ) ಬಾಳಿಗೊಂದು ಬೆಳಕು (ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಕೃತಿ), ಯೋಗಾಸನ ಕೈಪಿಡಿ, ಅಷ್ಟಾವರಣ (ಮಕ್ಕಳಿಗಾಗಿ) ಪ್ರವಾಸ ಕಥನ, ತಪ್ಪುಗಳ ಹೆಜ್ಜೆ, ಶಾಲಾ ಮಕ್ಕಳಿಗಾಗಿ ಬಸವಶ್ರೀ ಕಾಪಿ ಪುಸ್ತಕ, ಸಾಕ್ಷಿಗಳಿಲ್ಲದ ಸತ್ಯ (ಆತ್ಮನಿವೇದನೆ) ಮತ್ತು ಇಷ್ಟಲಿಂಗ ಯೋಗ ಎಂಬ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ.

ಇದೀಗ 'ಬಸವ ಧರ್ಮದ ಇಷ್ಟಲಿಂಗ ತತ್ವ' ಮತ್ತು 'ವಚನ ಸಂಪದ ಪಾರಾಯಣ' ಎಂಬ ಕೃತಿಗಳು ಮುದ್ರಣ ಗೊಂಡಿರುತ್ತವೆ. ನಮ್ಮ ಪ್ರಶ್ನೆಗಳಿಗೆ ಶರಣರ ಉತ್ತರ ಮತ್ತು ಅಂಗೈಯಲ್ಲಿ ಅಮೃತ ಕೃತಿಗಳ ಬರವಣಿಗೆಯು ಶ್ರೀ ಶಿವಾನಂದ ಗುರೂಜಿಯವರಿಂದ ನಡೆಯುತ್ತಿದೆ.

ಶ್ರೀಗಳ ಸಾಹಿತ್ಯಿಕ ಕೃಷಿಗೆ ಹಲವು ಪ್ರಶಸ್ತಿಗಳು ಲಭಿಸಿವೆ. ಗ್ರಾಮೀಣ ಸಿರಿ ಪ್ರಶಸ್ತಿ, ಗಣಾಚಾರ ಪ್ರಶಸ್ತಿ, ವಿದ್ಯಾದಾನ ಸೇವಾಯೋಗಿ ಪ್ರಶಸ್ತಿ, ತಪ್ಪುಗಳ ಹೆಜ್ಜೆ ಪ್ರವಾಸ ಕಥನಕ್ಕೆ ಪ್ರಶಸ್ತಿ ದೊರಕಿವೆ. ಜೊತೆಗೆ ಶರಣ ದಾಂಪತ್ಯ ಚೇತನ ಪ್ರಶಸ್ತಿ, ಅಮರಗಣ ಪ್ರಶಸ್ತಿ, ಶರಣ ಸಂಸ್ಕೃತಿ ಪ್ರಶಸ್ತಿ, ಹೀಗೆ ಹಲವಾರು ಪ್ರಶಸ್ತಿ, ಬಹುಮಾನ, ಗೌರವಾದಾರ ಗಳು ಇವರ ಸಾಹಿತ್ಯ ಕೃಷಿಗೆ ಸಂದಿವೆ. ಅಷ್ಟೇ ಅಲ್ಲದೇ ಶಿಕ್ಷಣ ಕ್ಷೇತ್ರದಲ್ಲೂ ಅಮೋಘ ಸೇವೆ ಸಲ್ಲಿಸಿ ಸಾವಿರಾರು ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದಾರೆ.

ಇದೀಗ ಇವರ ಈ ಎಲ್ಲಾ ಸಾಹಿತ್ಯ ಕೃಷಿಗೆ ಕಿರೀಟ ಪ್ರಾಯವೆಂಬಂತೆ ದಾವಣಗೆರೆ 11ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ ಸ್ಥಾನ ದೊರೆತಿರುವುದು ಸಾಹಿತ್ಯ ವಲಯದಲ್ಲಿ ಸಂತಸ ಉಂಟು ಮಾಡಿದೆ.

## ಶಿವಾನಂದ ಗುರೂಜಿ ಆಶ್ರಮಕ್ಕೆ ಜಿಲ್ಲಾ ಕಸಾಪ ಭೇಟಿ



ದಾವಣಗೆರೆ, ಜ. 23 - ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ನಿಯೋಗ ಅಧ್ಯಕ್ಷರಾದ ಸುಮತಿ ಜಯಪ್ಪ ಇವರ ನೇತೃತ್ವದಲ್ಲಿ ಶ್ರೀ ಶಿವಾನಂದ ಗುರೂಜೀ ಅವರ ಆಶ್ರಮಕ್ಕೆ ಭೇಟಿ ನೀಡಿ, ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನ ಅಲಂಕರಿಸಿ, ಸಮ್ಮೇಳನವನ್ನು ಯಶಸ್ವಿಗೊಳಿಸಿ ಕೊಡಬೇಕೆಂದು ಕೇಳಿಕೊಳ್ಳಲಾಯಿತು. ಪರಿಷತ್‌ನ ವತಿಯಿಂದ ಶ್ರೀಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.ಈ ಸಂದರ್ಭದಲ್ಲಿ ದಾವಣಗೆರೆ ತಾಲ್ಲೂಕು ಕಸಾಪ ಅಧ್ಯಕ್ಷರಾದ ಸುಮತಿ ಜಯಪ್ಪ, ಗೌರವ ಕಾರ್ಯದರ್ಶಿ ದಾಗಿನಕಟ್ಟೆ ಪರಮೇಶ್ವರಪ್ಪ, ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿ ಸಿ.ಜಿ. ಜಗದೀಶ್ ಕೂಲಂಬಿ, ತಾಲ್ಲೂಕು ಕಸಾಪ ನಿರ್ದೇಶಕ ಕೆ.ಸಿ. ಲಿಂಗರಾಜ್ ಆನೆಕೊಂಡ, ಶಿವಕುಮಾರ್ ಆರ್, ಎ.ಎಂ. ಸಿದ್ದೇಶ್ ಕುರ್ಕಿ, ಕರಿಬಸಪ್ಪ ಟಿ. ಮತ್ತು ದಾವಣಗೆರೆ ಜಿಲ್ಲಾ ಸರ್ಕಾರಿ ನೌಕರ ಸಂಘದ ಮಾಜಿ ಅಧ್ಯಕ್ಷ ಕೆ. ಶಿವಶಂಕರ್ ಉಪಸ್ಥಿತರಿದ್ದರು.

# ನಗರ ದೇವತೆಗೆ ಹರಕೆ ತೀರಿಸಿದ ಎಸ್ಸೆಸ್ ಯುವ ಅಭಿಮಾನಿ ಬಳಗ



ದಾವಣಗೆರೆ, ಜ.23- ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅನಾರೋಗ್ಯದಿಂದ ಗುಣಮುಖರಾಗಿ ನಗರಕ್ಕೆ ಆಗಮಿಸಿದ ಹಿನ್ನೆಲೆಯಲ್ಲಿ ನಗರ ದೇವತೆ ದುರ್ಗಾಂಬಿಕಾ ದೇವಿಗೆ 101 ಕಾಯಿ ಒಡೆಯುವ ಮೂಲಕ ಎಸ್.ಎಸ್ ಯುವ ಅಭಿಮಾನಿ ಬಳಗ ಹರಕೆ ತೀರಿಸಿತು. ಈ ವೇಳೆ ಶ್ರೀ ದುರ್ಗಾಂಬಿಕಾ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಸಿಹಿ ಹಂಚಲಾಯಿತು. ಶಾಸಕರ ಮೊಮ್ಮಗ ಸಮರ್ಥ್ ಶಾಮನೂರು, ಪಾಲಿಕೆ ಸದಸ್ಯ ಎಲ್.ಎಂ.ಹೆಚ್. ಸಾಗರ್, ಶಂಭು ಉರೇಕೊಂಡಿ, ಶಿವರತನ್, ರಂಗಸ್ವಾಮಿ, ಅಜಿತ್ ಆಲೂರು, ಶ್ರೀನಿವಾಸ್ ಕಲ್ಪತರು, ಮುಜಾಹಿದ್ ಪಾಷಾ, ಸುಭಾಷ್, ರಾಜು ಭಂಡಾರಿ ಇದ್ದರು.

# ಎಸ್ಸೆಸ್ ಆರೋಗ್ಯಕ್ಕಾಗಿ ಧರ್ಮಸ್ಥಳ, ಕುಕ್ಕೆಯಲ್ಲಿ ವಿಶೇಷ ಪೂಜೆ

ದಾವಣಗೆರೆ, ಜ. 23 - ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರಾಧ್ಯಕ್ಷ ಹಾಗೂ ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪರ ಆರೋಗ್ಯ ಮತ್ತು ಆಯಸ್ಸು ವೃದ್ಧಿಸಲೆಂದು ಮಹಾನಗರ ಪಾಲಿಕೆ 38ನೇ ವಾರ್ಡ್‌ನ ಸದಸ್ಯ ಮಂಜುನಾಥ್ ಗಡಿಗುಡಾಳ್ ನೇತೃತ್ವದಲ್ಲಿ ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ ಹಾಗೂ ಕುಕ್ಕೆ ಸುಬ್ರಹ್ಮಣ್ಯ ಸನ್ನಿಧಿಯಲ್ಲಿ ದೇವರ ದರ್ಶನ ಪಡೆಯಲಾಯಿತು.



ಡಾ. ಶಾಮನೂರು ಶಿವಶಂಕರಪ್ಪ ಅವರು ದಾವಣಗೆರೆಗೆ ನೀಡಿರುವ ಕೊಡುಗೆ ಅಪಾರ. ದಾನ, ಧರ್ಮ, ದೇವಸ್ಥಾನಗಳ ಜೀರ್ಣೋದ್ಧಾರ, ವಿಶ್ವ ಭೂಪಟದಲ್ಲಿ ದಾವಣಗೆರೆ ಗುರುತಿಸುವಂತಾಗಲು ಪ್ರಮುಖ ಕಾರಣೀಭೂತರಲ್ಲಿ ಶಿವಶಂಕರಪ್ಪ ಅವರೂ ಒಬ್ಬರು. ಅವರ ಆರೋಗ್ಯ ಸುಧಾರಿಸಲಿ, ಆಯಸ್ಸು ವೃದ್ಧಿಸಲಿ ಎಂದು ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ, ಪ್ರಾರ್ಥಿಸಲಾಯಿತು.

ಈ ವೇಳೆ ಮಾತನಾಡಿದ ಮಂಜುನಾಥ್ ಗಡಿಗುಡಾಳ್ ಅವರು ಎಂಸಿಸಿ ಬಿ ಬ್ಲಾಕ್ ನ ಜಿ.ಎಸ್.ಎಂ. ಸ್ನೇಹ ಬಳಗದ ಸದಸ್ಯರು ವಿಶೇಷ ಪ್ರಾರ್ಥನೆ ಸಲ್ಲಿಸುವ ಕೈಂಕರ್ಯ ಕೈಗೊಂಡಿದ್ದರು. ಶಾಮನೂರು ಶಿವಶಂಕರಪ್ಪ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಆರೋಗ್ಯವಂತರಾಗಿ ದಾವಣಗೆರೆಗೆ ಆಗಮಿಸಿ ಎಂದಿನಂತೆ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹಿರಿಯರು, ಮಾರ್ಗದರ್ಶಕರು ನೂರು ಕಾಲ ಚೆನ್ನಾಗಿರಬೇಕು. ನಮ್ಮಂಥವರಿಗೆ ಅವರ ಆಶೀರ್ವಾದ ಹಾಗೂ ಮಾರ್ಗದರ್ಶನದ ಅಗತ್ಯತೆ ಇದೆ ಎಂದು ತಿಳಿಸಿದರು.

# ನಗರದಲ್ಲಿ ಇಂದು ದಕ್ಷಿಣ ಕಾಂಗ್ರೆಸ್ ಸಭೆ

ನಗರದ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಹಾನಗರ ಪಾಲಿಕೆ ಕಾಂಗ್ರೆಸ್ ಸದಸ್ಯರು, 2018ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು, ವಾರ್ಡ್ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಸಭೆಯನ್ನು ಇಂದು ಕರೆಯಲಾಗಿದೆ. ಸಂಜೆ 5 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ದಕ್ಷಿಣ ನಗರ ಘಟಕದ ಅಧ್ಯಕ್ಷ ಅಯೂಬ್ ಪೈಲ್ವಾನ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಬೃಹತ್ ರಕ್ತದಾನ ಶಿಬಿರ

ಆಲ್ ಇಂಡಿಯಾ ಆರ್ಗನೈಜೇಷನ್ ಆಫ್ ಕೆಮಿಸ್ಟ್ ಅಂಡ್ ಡ್ರಗ್ಗಿಸ್ಟ್ ನ 50 ನೇ ವರ್ಷಾಚರಣೆ ಅಂಗವಾಗಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ನಗರದ ನಿಜಲಿಂಗಪ್ಪ ಬಡಾವಣೆಯ ಹಿಮೋಫಿಲಿಯಾ ಸೊಸೈಟಿ ಆವರಣದಲ್ಲಿ ಬೃಹತ್ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ.

# ಇಂದು ವಿಶೇಷಚೇತನರಿಗೆ ಕಾರ್ಯಾಗಾರ

ಜಿಲ್ಲಾಡಳಿತದಿಂದ ಸ್ವಾಮಿ ವಿವೇಕಾನಂದರ ಜಯಂತಿ, ರಾಷ್ಟ್ರೀಯ ಯುವ ದಿನ ದಿನಾಚರಣೆ ಅಂಗವಾಗಿ ಇಂದು ಬೆಳಿಗ್ಗೆ 10 ಕ್ಕೆ ಜಿಲ್ಲಾಡಳಿತ ಭವನದಲ್ಲಿ ವಿಶೇಷ ಚೇತನರ ಸ್ವ ಉದ್ಯೋಗ ಮಾಹಿತಿ ಕಾರ್ಯಾಗಾರ ನಡೆಯಲಿದೆ.

# ಹರಿಹರ ತುಂಗಭದ್ರಾ ಕ್ರೆಡಿಟ್ ಸೊಸೈಟಿಗೆ ಹೇಮಂತರಾಜ್ ಅಧ್ಯಕ್ಷ

ಹರಿಹರ, ಜ. 23 - ನಗರದ ದಿ ತುಂಗಭದ್ರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ನೂತನ ಅಧ್ಯಕ್ಷರಾಗಿ ಡಿ. ಹೇಮಂತರಾಜ್ ಮತ್ತು ಉಪಾಧ್ಯಕ್ಷರಾಗಿ ಕೆ.ಬಿ. ಮಂಜುನಾಥ್ ಅವಿರೋಧ ವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಹೆಚ್. ಸುನಿತಾ ಘೋಷಣೆ ಮಾಡಿದರು.

ನಗರದ ದಿ ತುಂಗಭದ್ರಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಸಭಾಂಗಣದಲ್ಲಿ ಇಂದು ಸಂಜೆ ಮುಂದಿನ ಐದು ವರ್ಷದ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಡಿ. ಹೇಮಂತರಾಜ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಬಿ. ಮಂಜುನಾಥ್ ಮಾತ್ರ ನಾಮಪತ್ರ ಸಲ್ಲಿಸಿದರು.

ಚುನಾವಣಾ ಅಧಿಕಾರಿಗಳು ನಾಮ ಪತ್ರಗಳನ್ನು ಪರಿಶೀಲಿಸಿ ಕ್ರಮಬದ್ಧವಾಗಿರುವುದನ್ನು ಸಭೆಯ ಗಮನಕ್ಕೆ ತಂದು ಮುಂದಿನ ಐದು ವರ್ಷದ ಅವಧಿಗೆ ದಿ ತುಂಗಭದ್ರಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಡಿ. ಹೇಮಂತರಾಜ್ ಮತ್ತು ಉಪಾಧ್ಯಕ್ಷರಾಗಿ ಕೆ.ಬಿ. ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



**ಉಪಾಧ್ಯಕ್ಷರಾಗಿ ಕೆ.ಬಿ. ಮಂಜುನಾಥ್ ಅವಿರೋಧ ಆಯ್ಕೆ**

# ಪುರುಷರ ಆಯೋಗಕ್ಕಾಗಿ ಶಾಸಕನಿಂದ ಖಾಸಗಿ ಮಸೂದೆ

ತಿರುವನಂತಪುರಂ, ಜ. 23- ಪುರುಷರ ವಿರುದ್ಧ ಲೈಂಗಿಕ ಪೀಡನೆಯ ಸುಳ್ಳು ಪ್ರಕರಣಗಳು ದಾಖಲಾಗುತ್ತಿರುವ ಹಿನ್ನೆಲೆಯಲ್ಲಿ ಪುರುಷರ ಆಯೋಗ ರಚನೆ ಆಗಬೇಕು ಎಂದು ಕೇರಳ ಕಾಂಗ್ರೆಸ್ ಶಾಸಕ ಇ.ಪಿ. ಕುಣ್ಣಪ್ಪಿಳ್ಳೈ ಅವರು ಖಾಸಗಿ ಮಸೂದೆ ಮಂಡಿಸಲು ಮುಂದಾಗಿದ್ದಾರೆ.

ಈ ಕುರಿತ ಕರಡು ಮಸೂದೆ ಈಗಾಗಲೇ ಸಿದ್ಧವಾಗಿದೆ ಎಂದು ಶಾಸಕ ಹೇಳಿದ್ದಾರೆ. ಶಾಸಕ ಕುಣ್ಣಪಿಳ್ಳೈ ಅವರು ಸ್ವತಹ ಲೈಂಗಿಕ ಪೀಡನೆ ಪ್ರಕರಣದಲ್ಲಿ ಆರೋಪಿಯಾಗಿದ್ದಾರೆ.

ತಮ್ಮ ವಿರುದ್ಧದ ಪ್ರಕರಣ ನ್ಯಾಯಾಲಯ ದಲ್ಲಿ ಬಾಕಿ ಇದೆ. ಈ ಬಗ್ಗೆ ನನ್ನನ್ನು ಸಮರ್ಥಿಸಿಕೊಳ್ಳಲು ಮುಂದಾಗುವುದಿಲ್ಲ. ಆದರೆ ಇತರ ಹಲವು ಪುರುಷರು ಸುಳ್ಳು ಪ್ರಕರಣಗಳನ್ನು ಎದುರಿಸುತ್ತಿದ್ದಾರೆ ಎಂದವರು ಹೇಳಿದ್ದಾರೆ. ಸುಳ್ಳು ಪ್ರಕರಣ ಎದುರಿಸುವ ಕೆಲವರು ಹಣ ಕೊಟ್ಟು ಪಾರಾದರೆ, ಇನ್ನೂ ಕೆಲವರು ತಲೆಮರೆಸಿಕೊಳ್ಳುತ್ತಿದ್ದಾರೆ ಎಂದು ಶಾಸಕರು ಹೇಳಿದ್ದಾರೆ.

ಮಹಿಳಾ ಆಯೋಗದ ರೀತಿಯಲ್ಲೇ ಪುರುಷ ಆಯೋಗ ರಚಿಸಬೇಕು. ಪುರುಷರ ಹಕ್ಕುಗಳ ರಕ್ಷಣೆಗಾಗಿ ಈ ಆಯೋಗದ ಅಗತ್ಯವಿದೆ. ಈ ಆಯೋಗದ ಬಳಿ ಪುರುಷರು ತೆರಳಿ ತಮ್ಮ ದೂರುಗಳನ್ನು ದಾಖಲಿಸಬಹುದು ಎಂದವರು ಹೇಳಿದ್ದಾರೆ.

ಮಹಿಳೆಯರನ್ನು ದುರ್ಬಲ ವರ್ಗದವರು ಎಂದು ಪರಿಗಣಿಸಲಾಗುತ್ತದೆ. ಅವರು ತಮ್ಮದೇ ಆದ ಹಕ್ಕು ಹಾಗೂ ಸೌಲಭ್ಯಗಳನ್ನು ಹೊಂದಿದ್ದಾರೆ. ಆದರೆ ಈ ರಕ್ಷಣೆಯನ್ನು ದುರುಪಯೋಗಪಡಿಸಿಕೊಂಡು ಪುರುಷರನ್ನು ಪೀಡಿಸುವ ಘಟನೆಗಳು ನಡೆಯುತ್ತಿವೆ ಎಂದವರು ಹೇಳಿದರು.

ನಟಿ ಹನಿ ರೋಜ್ ಅವರನ್ನು ಅವಹೇಳನ ಮಾಡಿದ ಆರೋಪದ ಮೇಲೆ ಬಾಬಿ ಚೆಮ್ಮನೂರ್ ಅವರನ್ನು ಆರು ದಿನಗಳ ಕಾಲ ಜೈಲಿನಲ್ಲಿ ಇರಿಸಲಾಗಿತ್ತು. ಈ ಪ್ರಕರಣದಲ್ಲಿ ಹೆಚ್ಚೇನೂ ಗಂಭೀರತೆ ಇದೆ ಎಂದು ನಾನು ಭಾವಿಸಿವುದಿಲ್ಲ. ಈ ರೀತಿಯ ಪ್ರಕರಣಗಳು ಹುಟ್ಟಿಕೊಳ್ಳುತ್ತಾ ಹೋದರೆ ಪ್ರತಿಯೊಬ್ಬರೂ ಜೈಲಿನಲ್ಲಿ ಇರಬೇಕಾಗುತ್ತದೆ ಎಂದು ಶಾಸಕ ಹೇಳಿದ್ದಾರೆ.


|| ಶ್ರೀ ಮೈಲಾರ ಲಿಂಗೇಶ್ವರ ಪ್ರಸನ್ನ || || ಶ್ರೀ ತುಳಜಾಭವಾನಿ ಪ್ರಸನ್ನ ||

**ವೈಕುಂಠ ಸಮಾರಾಧನೆ ಆಹ್ವಾನ**



ದಾವಣಗೆರೆ ಸಿಟಿ ಕುಂಬಾರ ಪೇಟೆ, ಶಿವಾಜಿ ನಗರದ ವಾಸಿಯಾದ
ಶ್ರೀಮತಿ ಜಯಲಕ್ಷ್ಮಿಬಾಯಿ ಇವರು ಮಾಡುವ ವಿಜ್ಞಾಪನೆಗಳು.
ದಿ.: 13.01.2025ನೇ ಸೋಮವಾರ ಬೆಳಿಗ್ಗೆ 6.45ಕ್ಕೆ ನಮ್ಮ ಪೂಜ್ಯ ಪತಿಯವರಾದ
**ಶ್ರೀ ನೀಲಕಂಠರಾವ್ ಮಾನೆ** (ಸೈಕಲ್ ಷಾಪ್ ಕಂಠಪ್ಪ)
ಇವರು ವೈಕುಂಠ ವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ
**ವೈಕುಂಠ ಸಮಾರಾಧನೆಯನ್ನು**
ದಿನಾಂಕ : 24.01.2025ನೇ ಶುಕ್ರವಾರ ಬೆಳಿಗ್ಗೆ 11.ಕ್ಕೆ
ದಾವಣಗೆರೆಯ ಕುಂಬಾರಪೇಟೆ ಶಿವಾಜಿನಗರದ ಮೃತರ ಸ್ವಗೃಹ
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು
ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ಜಯಲಕ್ಷ್ಮಿಬಾಯಿ ಮತ್ತು ಮಕ್ಕಳು
ಶ್ರೀಮತಿ ಗಾಯತ್ರಿ ಬಾಯಿ ದಿ. ಮಂಜುನಾಥರಾವ್ ಮಾನೆ
ಮತ್ತು ಮಕ್ಕಳು ಹಾಗೂ ಸೊಸೆಯಂದಿರು ಮತ್ತು ಮೊಮ್ಮಕ್ಕಳು.
85537 97278

ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


# ಸಭಾಕ್ಕೆ ಪದಾಧಿಕಾರಿಗಳ ಆಯ್ಕೆ

**(1ನೇ ಪುಟದಿಂದ)** ಉಪಾಧ್ಯಕ್ಷರಾಗಿ ಡಾ.ಪ್ರಭಾಕರ ಕೋರೆ, ವಿ.ಸಿ. ಚರಂತಿಮಠ್, ಬಿ.ಎಸ್. ಸಚ್ಚಿದಾನಂದ ಮೂರ್ತಿ, ವಿನಯ್ ಕುಲಕರ್ಣಿ, ಎ.ಎಸ್. ವೀರಣ್ಣ, ಅಣಬೇರು ರಾಜಣ್ಣ, ಎಸ್.ಎಸ್. ಗಣೇಶ್, ಶರಣ ಬಸಪ್ಪ ದರ್ಶನಾಪೂರ್, ಬಿ.ಕೆ. ಚಂದ್ರಕಲಾ, ಗುರಮ್ಮ ಸಿದ್ದರೆಡ್ಡಿ, ಸಿದ್ರಾಮಪ್ಪ ಸಿ. ಉಪ್ಪಿನ್, ವಿಶ್ವನಾಥ್ ಬಾಬುರಾವ್ ಚಕೋಟೆ, ಪ್ರಧಾನ ಕಾರ್ಯದರ್ಶಿಯಾಗಿ ಈಶ್ವರ ಖಂಡ್ರೆ, ಕಾರ್ಯದರ್ಶಿಯಾಗಿ ಹೆಚ್.ಎಂ. ರೇಣುಕಾ ಪ್ರಸನ್ನ ಅವರನ್ನು ಆಯ್ಕೆ ಮಾಡಲಾಗಿದೆ.

# ಇಂದು ಎಂಇಎಸ್ ಶಿಕ್ಷಣ ಸಂಸ್ಥೆಯ 'ಪ್ರತಿಭೋತ್ಸವ'

ದಾವಣಗೆರೆ ಆಂಜನೇಯ ಬಡಾವಣೆಯಲ್ಲಿರುವ ಎಂ.ಇ.ಎಸ್. ಸಮೂಹ ಶಿಕ್ಷಣ ಸಂಸ್ಥೆಯ ವತಿಯಿಂದ ಇಂದು ಸಂಜೆ 4 ಗಂಟೆಗೆ ನಗರದ ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದಲ್ಲಿ 'ಪ್ರತಿಭೋತ್ಸವ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂಸ್ಥೆ ಅಧ್ಯಕ್ಷ ಕೆ.ಪಿ.ಮಲ್ಲೇಶ್ ಅಧ್ಯಕ್ಷತೆ ವಹಿಸುವರು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ಪುಷ್ಪಲತಾ, ಪ್ಯಾರೋಟ್ರೋಫರ್ ಆರ್ಮಿ ಪೋಸ್ಟಿಂಗ್ ಆನ್ ಸಿಯಾಚಿನ್ ಗ್ಲೇಜಿಯರ್ ಜಿ. ಶಿವ, ಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ ವಿ.ಮಂಜುಳಾ ಮಲ್ಲೇಶ್, ವ್ಯವಸ್ಥಾಪಕ ನಿರ್ದೇಶಕ ಕೆ. ಎಂ.ಪ್ರದೀಪ್, ಸಂಯೋಜನಾಧಿಕಾರಿ ಸೌಮ್ಯ ಹೆಚ್.ಟಿ. ಪ್ರದೀಪ್ ಮತ್ತಿತರರು ಭಾಗವಹಿಸಲಿದ್ದಾರೆ.


|| ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ||

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ, ತರಳಬಾಳು ಬಡಾವಣೆ ವಾಸಿ
**ಶ್ರೀಮತಿ ಗಿರಿಜಮ್ಮ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 21.01.2025ನೇ ಮಂಗಳವಾರ ಬೆಳಗಿನ ಜಾವ 02.30ಕ್ಕೆ ನನ್ನ ಪೂಜ್ಯ ಪತಿಯವರಾದ
**ಹೆಮ್ಮನಬೇತೂರು ಬೆಣ್ಣೆಹಳ್ಳಿ ಮಠದ ಶ್ರೀ ರೇವಣಸಿದ್ದಯ್ಯ ಬಿ.ಎಂ.**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**
ದಿನಾಂಕ 25.01.2025ನೇ ಶನಿವಾರ ಮಧ್ಯಾಹ್ನ 12 ಗಂಟೆಗೆ ಶ್ರೀ ಚೌಡೇಶ್ವರಿ ಸಮುದಾಯ ಭವನ, ಐಟಿಐ ಕಾಲೇಜು ಆವರಣ, ದಾವಣಗೆರೆಯಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು
ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುವ.
**ದುಃಖತಪ್ತರು : ಪೂರ್ಣಿಮಾ : 94839 90149, ರಮೇಶ್ : 98445 83471**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



|| ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ || || ಶ್ರೀ ಚಂದ್ರಗುತ್ತ್ಯಮ್ಮದೇವಿ ಪ್ರಸನ್ನ ||

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ತಾ. ಹಳೇಕುಂದುವಾಡ ಗ್ರಾಮದ ವಾಸಿ
**ದಿ. ದುರುಗಮ್ಮ ದಿ. ಶ್ರೀ ಹಂಚಿನಮನೆ ಗುಡ್ಡಪ್ಪ ಇವರ ಪುತ್ರ ದಿ. ಹೆಚ್.ಜಿ. ತಿಪ್ಪಣ್ಣ**
**ಇವರ ಧರ್ಮಪತ್ನಿ ಶ್ರೀಮತಿ ನಾಗಮ್ಮ ಮತ್ತು ಮಕ್ಕಳು** ಇವರು ಮಾಡುವ ವಿಜ್ಞಾಪನೆಗಳು.



ದಿನಾಂಕ : 16.01.2025ನೇ ಗುರುವಾರ ಬೆಳಿಗ್ಗೆ 09.40ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಹಂಚಿನಮನಿ ಹೆಚ್.ಜಿ. ತಿಪ್ಪಣ್ಣ**
**ಮಾಜಿ ಅಧ್ಯಕ್ಷರು, ಸ್ಥಾಯಿ ಸಮಿತಿ ಮತ್ತು ಮಹಾನಗರ ಪಾಲಿಕೆ ಮಾಜಿ ಸದಸ್ಯರು**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**
ದಿನಾಂಕ 24.01.2025ನೇ ಶುಕ್ರವಾರ ಬೆಳಿಗ್ಗೆ 9.00ಕ್ಕೆ ದಾವಣಗೆರೆ ತಾಲ್ಲೂಕು ಹಳೇಕುಂದುವಾಡ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುವ.
ಇಂತಿ ದುಃಖತಪ್ತರು : ಪತ್ನಿ : **ಶ್ರೀಮತಿ ನಾಗಮ್ಮ ಮತ್ತು ಮಕ್ಕಳು**
**ಶ್ರೀಮತಿ ಸುಜಾತ ಶ್ರೀ ಹೆಚ್.ಟಿ. ಮಹಾಂತೇಶ್**
**ದಿ|| ಶ್ರೀಮತಿ ಹೊನ್ನಮ್ಮ ಶ್ರೀ ಹೆಚ್.ಟಿ. ಮಂಜುನಾಥ**
**ಶ್ರೀಮತಿ ವಾಣಿ ಶ್ರೀ ಹೆಚ್.ಟಿ. ಗುರುಮೂರ್ತಿ**
**ಶ್ರೀಮತಿ ಮಂಗಳಮ್ಮ ಶ್ರೀ ಓಂಕಾರಪ್ಪ** ಭದ್ರಾಪುರ. ಸಹೋದರರು, ಮಕ್ಕಳು, ಮೊಮ್ಮಕ್ಕಳು, ಹಳೇಕುಂದುವಾಡ. ಹಂಚಿನಮನಿ ವಂಶಸ್ಥರು, ಗೌಡ್ಲರ ವಂಶಸ್ಥರು ಹಳೇಕುಂದುವಾಡ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು, ಮೊ. 99644 68297

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


# ಮುಡಾ ; ಸಿಎಂಗೆ ಲೋಕಾಯುಕ್ತ ಕ್ಲೀನ್ ಚಿಟ್ : ಸತ್ಯಕ್ಕೆ ಜಯ



ದಾವಣಗೆರೆ, ಜ. 23 - ಮುಡಾ ಹಗರಣದಲ್ಲಿ ಸಿ.ಎಂ. ಸಿದ್ದರಾಮಯ್ಯಗೆ ಲೋಕಾಯುಕ್ತ ಕ್ಲೀನ್ ಚಿಟ್ ನಿಂದ ಸತ್ಯಕ್ಕೆ ಜಯ ದೊರಕಿದೆ ಎಂದು ದಾವಣಗೆರೆ ಜಿಲ್ಲಾ ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್. ಪ್ರವೀಣ್ ಕುಮಾರ್ ತಿಳಿಸಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರ ಹೆಸರಿಗೆ ಕಪ್ಪು ಚುಕ್ಕೆ ತರುವ ಪ್ರಯತ್ನ ರಾಜ್ಯದಲ್ಲಿ ನಡೆಯುತ್ತಿದೆ, ಆದರೆ ಇದು ನಡೆಯುವುದಿಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರನ್ನು ಅನವಶ್ಯಕವಾಗಿ ಪ್ರಸ್ತಾಪ ಮಾಡಿದೆ.

ಲೋಕಾಯುಕ್ತ ವರದಿಯಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಪಾರ್ವತಿಗೆ ಕ್ಲೀನ್‌ಚಿಟ್ ನೀಡಲಾಗಿದೆ ಎಂದು ದಾವಣಗೆರೆ ಜಿಲ್ಲಾ ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಕುಮಾರ್ ತಿಳಿಸಿದ್ದಾರೆ.

# ಇಂದು ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಪ್ರತಿಭಟನೆ

ದಾವಣಗೆರೆ, ಜ. 23- ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಸಂಘ (ಹೆಚ್‌ಕೆಆರ್ ಬಣ)ದ ವತಿಯಿಂದ ನಾಳೆ ದಿನಾಂಕ 24 ರಂದು ಬೆಳಿಗ್ಗೆ 10 ಗಂಟೆಗೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಮುಖಂಡರಾದ ವಿಶಾಲಾಕ್ಷಿ ಮೃತ್ಯುಂಜಯ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸರ್ಕಾರ ಜಾರಿಗೊಳಿಸುವ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 1975 ರಲ್ಲಿ ರೂಪಿಸಿರುವ ಅಭಿವೃದ್ಧಿ ಯೋಜನೆ (ಸಿಡಿಎಸ್) ಯು 50 ವರ್ಷಗಳಾಗಿ ಸುವರ್ಣ ಸಂಭ್ರಮದತ್ತ ಹೆಜ್ಜೆ ಹಾಕುತ್ತಿದೆ. ಆದರೆ ಸರ್ಕಾರ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಬೇಡಿಕೆಗಳನ್ನು ಈಡೇರಿಸದೇ ನಿರ್ಲಕ್ಷ್ಯ ಧೋರಣೆ ತೋರುತ್ತಿದೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಜೆ.ಎಂ.ಉಮಾ, ಎಂ. ಸರ್ವಮ್ಮ, ಸಿ.ಬಿ. ಕಾಳಮ್ಮ, ಚೌಡಮ್ಮ, ಸಾವಿತ್ರಮ್ಮ, ಹೊನ್ನಮ್ಮ ಉಪಸ್ಥಿತರಿದ್ದರು.

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜನವರಿ 24, 2025




ದಾವಣಗೆರೆಯ ಅಥಣಿ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಶಾಲೆಯಲ್ಲಿದೆ ಶಿಕ್ಷಣದ ಜೊತೆಗೆ ರಕ್ಷಣೆ' ತರಬೇತಿ ಕಾರ್ಯಾಗಾರದಲ್ಲಿ ಅಪರ್ಣಾ ಕೊಳ್ಳ ಮಾತನಾಡಿದರು.

## ಅನಧಿಕೃತ ಕೋಚಿಂಗ್ ಸೆಂಟರ್‌ಗಳ ಹಾವಳಿ

### ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ ಅಪರ್ಣಾ ಕೊಳ್ಳ ಕಳವಳ

ದಾವಣಗೆರೆ, ಜ.23- ನಗರದಲ್ಲಿ ಅನುಮತಿ ಪಡೆಯದೇ ನಡೆಸುವ ಕೋಚಿಂಗ್ ಸೆಂಟರ್ ಹಾವಳಿ ಹೆಚ್ಚಾಗಿದೆ. ಈ ಬಗ್ಗೆ ಪೋಷಕರು ಎಚ್ಚರಿಕೆ ವಹಿಸುವ ಅಗತ್ಯವಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ ಅಪರ್ಣಾ ಕೊಳ್ಳ ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ವತಿಯಿಂದ ಗುರುವಾರ ಇಲ್ಲಿನ ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಶಾಲೆಯಲ್ಲಿದೆ ಶಿಕ್ಷಣದ ಜೊತೆಗೆ ರಕ್ಷಣೆ' ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಗುಲ್ಬರ್ಗ ಜಿಲ್ಲೆಯಲ್ಲಿ ಅನುಮತಿ ಪಡೆಯದೇ ನಡೆಸಲಾಗುತ್ತಿದ್ದ ವಸತಿ ಶಾಲೆಯಲ್ಲಿ ಶಿಕ್ಷಕನೇ ವಿದ್ಯಾರ್ಥಿಯೊಬ್ಬರ ಮೇಲೆ ಅತ್ಯಾಚಾರ ನಡೆಸಿದ್ದ ಘಟನೆ ಇತ್ತೀಚೆಗೆ ನಡೆದಿತ್ತು. ಇಂತಹ ಘಟನೆಗಳು ನಡೆಯುವ ಮೊದಲೇ ಎಚ್ಚೆತ್ತುಕೊಳ್ಳುವುದು ಅಗತ್ಯ ಎಂದು ಹೇಳಿದರು.

ಪಿಯುಸಿ ಕಾಲೇಜುಗಳಲ್ಲೂ ಕೋಚಿಂಗ್ ಹೆಸರಿನಲ್ಲಿ ಮಕ್ಕಳನ್ನು ಉಳಿಸಿಕೊಳ್ಳಲಾಗುತ್ತದೆ. ಶಿಕ್ಷಣ ಇಲಾಖೆಯೂ ಇದಕ್ಕೆ ಅನುಮತಿ ನೀಡಲು ಬರುವುದಿಲ್ಲ. ಹೀಗಿದ್ದಾಗ ಯಾವ ಇಲಾಖೆ ಕೇಳಿ ಮಕ್ಕಳನ್ನು ಇಟ್ಟುಕೊಳ್ಳುತ್ತಾರೆ? ಹೀಗೆ ಅನಧಿಕೃತವಾಗಿ ಮಕ್ಕಳನ್ನು ಉಳಿಸಿಕೊಳ್ಳುವ ಕಡೆ ಮಕ್ಕಳ ಸುರಕ್ಷತೆ ಬಗ್ಗೆ ಗಮನ ಹರಿಸುವ ಅಗತ್ಯವಿದೆ ಎಂದು ಎಚ್ಚರಿಸಿದರು. ಜಿಲ್ಲೆಯಲ್ಲಿ 6,800 ಮಕ್ಕಳು ಶಾಲೆಯಿಂದ ಹೊರಗೆ ಉಳಿದಿದ್ದಾರೆ. 400 ಮಕ್ಕಳು ಕಳೆದ ವರ್ಷ ಹೊರಗೆ ಉಳಿದಿದ್ದರು ಎಂಬ ಅಂಕಿ ಅಂಶ ಇದೆ. ಈ ವರ್ಷ ಏಕೆ ಹೆಚ್ಚು ಎಂಬುದನ್ನು ಗಮನಿಸಬೇಕಿದೆ. ಎರಡೂ ಸಂಖ್ಯೆ ವಿಶ್ವಾಸಾರ್ಹವಾಗಿಲ್ಲ ಎಂದು ಹೇಳಿದರು.

ಸರ್ಕಾರಿ ಶಾಲೆಯಲ್ಲಿ ಶಾಲೆಯಿಂದ ಹೊರಗೆ ಉಳಿದ ಮಕ್ಕಳ ಸಂಖ್ಯೆ ಹೆಚ್ಚು ಇದೆ. ಆಯೋಗ ಇದನ್ನು ಗಂಭೀರವಾಗಿ ಪರಿಗಣಿಸಿದೆ. ಪ್ರತಿ ಜಿಲ್ಲೆಯಲ್ಲಿ ಮಾಹಿತಿ ಪಡೆಯಲಾಗುತ್ತಿದೆ. ಬಾಲ್ಯ ವಿವಾಹ ಹಾಗೂ ಪೋಕ್ಸೋ ಸಂತ್ರಸ್ತ ಮಕ್ಕಳ ಸಂಖ್ಯೆ ಸರ್ಕಾರಿ ಶಾಲೆಯಲ್ಲಿ ಹೆಚ್ಚಾಗಿದೆ (4ನೇ ಪುಟಕ್ಕೆ)

**ಸರ್ಕಾರಿ ಶಾಲೆಯೊಂದಕ್ಕೆ ಭೇಟಿ ನೀಡಿದಾಗ ಮಗು ಹಾಜರಾತಿ ಇದೆ. ಆದರೆ, ಗೈರು ಆಗಿತ್ತು. ಬಿಸಿಯೂಟದ ಹಾಜರಾತಿ ಹಾಗೂ ತರಗತಿ ಹಾಜರಾತಿ ನಡುವೆ ಸಾಮ್ಯತೆ ಇಲ್ಲ. ಒಂದೇ ಶಾಲೆಯಲ್ಲಿ ಎರಡು ರೀತಿಯ ದಾಖಲೆ ಸಿಗುತ್ತಿವೆ.**

**- ಅಪರ್ಣಾ ಕೊಳ್ಳ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ**

### ಬಿಸಿಯೂಟದಲ್ಲಿ ಎರಡು ಬಗೆ ಸಲ್ಲದು: ಕರೆಣ್ಣವರ್

**ಶಾಲೆಯಲ್ಲಿ ಮಧ್ಯಾಹ್ನ ನೀಡುವ ಬಿಸಿಯೂಟದಲ್ಲಿ ಎರಡು ಬಗೆ ಮಾಡಲಾಗುತ್ತದೆ. ಮಕ್ಕಳಿಗಾಗಿ ಹಾಗೂ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರಿಗಾಗಿ ಪ್ರತ್ಯೇಕ ಮಾಡಲಾಗುತ್ತದೆ.ಈ ರೀತಿ ಮಾಡಬಾರದು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಎಂ.ಕರೆಣ್ಣವರ್ ಹೇಳಿದರು.**

**ಬಿಸಿಯೂಟ ಸರ್ಕಾರದ ಮಹಾತ್ವಕಾಂಕ್ಷಿ ಯೋಜನೆಯಾಗಿದೆ. ಇದು ಸ್ವಚ್ಛ, ಪೌಷ್ಟಿಕ ಆಹಾರವಾಗಿರಬೇಕು. ಮಕ್ಕಳ ಭವಿಷ್ಯ ನಿರ್ಧರಿಸುವಲ್ಲಿ ಶಿಕ್ಷಕರ ಪಾತ್ರ ದೊಡ್ಡದು. ಆರೋಗ್ಯ ರಕ್ಷಣೆ ಕೂಡ ಮಕ್ಕಳಿಗೆ ಅಗತ್ಯ ಇದೆ. ಅಪೌಷ್ಟಿಕತೆ ಬಗ್ಗೆ ಹೆಚ್ಚು ಗಮನ ಹರಿಸಬೇಕು ಎಂದರು.**

**ಸರ್ಕಾರಿ ಶಾಲೆ ಯಲ್ಲಿ ಪಾಲಕರ ಸಭೆ ಕಡಿಮೆ ಆಗುತ್ತಿವೆ. ಪೋಷಕರ ಸಭೆ ನಡೆಸಿ, ಅವರ ಜವಾಬ್ದಾರಿ ಮನವರಿಕೆ ಮಾಡುವ ಮೂಲಕ ಶಿಕ್ಷಕರ ಜವಾಬ್ದಾರಿ ಹೊರೆ ಕಡಿಮೆ ಮಾಡಿಕೊಳ್ಳಬಹುದು ಎಂದು ಮಹಾವೀರ ಎಂ.ಕರೆಣ್ಣವರ್ ಸಲಹೆ ನೀಡಿದರು.**

## ಮುಡಾ: ಸಿಎಂಗೆ ಕ್ಲೀನ್ ಚಿಟ್ ?

### ಅಧಿಕಾರಿಗಳ ಲೋಪಕ್ಕೆ ಕ್ರಿಮಿನಲ್ ದಾವೆ: ತಜ್ಞರ ಸಲಹೆ ಕೇಳಿದ ಲೋಕಾಯುಕ್ತ

ಬೆಂಗಳೂರು,ಜ.23- ಮೈಸೂರು ನಗರಾಭಿ ವೃದ್ಧಿ ಪ್ರಾಧಿಕಾರದ 14 ಬಿಡಿ ನಿವೇಶನಗಳ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಕುಟುಂಬದ ಪಾತ್ರ ಇಲ್ಲ ಎಂದಿರುವ ಲೋಕಾಯುಕ್ತ, ಅಧಿಕಾರಿಗಳ ಲೋಪಕ್ಕೆ ಕ್ರಿಮಿನಲ್ ದಾವೆ ಹೂಡಬೇಕೇ, ಬೇಡವೇ ಎಂಬ ಬಗ್ಗೆ ಕಾನೂನು ತಜ್ಞರ ಸಲಹೆ ಕೇಳಿದೆ.

ನ್ಯಾಯಾಲಯದ ಆದೇಶದಂತೆ ಬಿಡಿ ನಿವೇಶನಗಳ ಹಂಚಿಕೆ ಕುರಿತು ತನಿಖೆ ನಡೆಸಿರುವ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್, ತನಿಖೆಯ ಬಹುಭಾಗ ಪೂರ್ಣಗೊಳಿಸಿ ಐಜಿ ಸುಬ್ರಹ್ಮಣ್ಯೇಶ್ವರ್ ರಾವ್ ಅವರಿಗೆ ವರದಿ ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಅವರ ಕುಟುಂಬ ನಿವೇಶನ ಗಳನ್ನು ಪಡೆದ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವ ಸಂಬಂಧ ರಾಜ್ಯ ಹೈಕೋರ್ಟ್‌ನಲ್ಲಿ ಮುಂದುವರೆದ ವಿಚಾರಣೆ ಜನವರಿ 27 ರಂದು ಬರಲಿದೆ.

ಇಲ್ಲಿಯವರೆಗೆ ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ನಡೆಸಿರುವ ತನಿಖಾ (5ನೇ ಪುಟಕ್ಕೆ)

### ಕ್ಲೀನ್ ಚಿಟ್ ಮಾಹಿತಿ ಇಲ್ಲ ಎಂದ ಸಿಎಂ



**ಬೆಂಗಳೂರು,ಜ.23- ಮುಡಾ ಪ್ರಕರಣದ ಲೋಕಾಯುಕ್ತ ತನಿಖೆಯಲ್ಲಿ ಕ್ಲೀನ್ ಚಿಟ್ ನೀಡಿರುವ ಕುರಿತು ತಮಗೆ ಮಾಹಿತಿ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಪ್ರತಿಕ್ರಿಯಿಸಿದ್ದಾರೆ. ಮುಡಾದಿಂದ ಬಿಡಿ ನಿವೇಶನಗಳನ್ನು ಪಡೆದುಕೊಳ್ಳುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬ ಪ್ರಭಾವ ಬೀರಿದೆ ಎಂಬ ಆರೋಪ ಕುರಿತು ಲೋಕಾಯುಕ್ತ ಪೋಲಿಸರು ತನಿಖೆ ನಡೆಸಿದ್ದರು. ಮುಖ್ಯಮಂತ್ರಿ ಯಾರಾಗಬೇಕೆಂಬ ಕುರಿತು ಕಾಂಗ್ರೆಸ್ ವರಿಷ್ಠರ ತೀರ್ಮಾನವೇ ಅಂತಿಮ ಎಂದರು.**

**ಮುಖ್ಯಮಂತ್ರಿ ಹುದ್ದೆ ಬಗ್ಗೆ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಸತೀಶ್ ಜಾರಕಿಹೊಳಿ ಬಣಗಳು ವ್ಯಕ್ತಪಡಿಸುತ್ತಿರುವ ಅಭಿಪ್ರಾಯಗಳು ಏನೇ ಇರಲಿ, ವರಿಷ್ಠರ ತೀರ್ಮಾನವೇ ಅಂತಿಮ ಎಂದರು. ಬಜೆಟ್ ಸಿದ್ಧತೆ ನಡೆಸಬೇಕಿರುವುದರಿಂದ 2025ರ ದಾವೋಸ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದರು. ನಿಗಮ ಹಾಗೂ ಮಂಡಳಿಗಳಿಗೆ ಅನುದಾನ ಬಿಡುಗಡೆ ಮಾಡುತ್ತಿಲ್ಲವೆಂಬ ಬಿಜೆಪಿ ಆರೋಪಗಳು ರಾಜಕೀಯ ಪ್ರೇರಿತ. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 128ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.**

## ಪ್ರಕರಣ ಮುಚ್ಚಿಹಾಕಲು ಲೋಕಾ ಪ್ರಯತ್ನ: ಅಶೋಕ್



ಬೆಂಗಳೂರು, ಜ. 23- ಮುಡಾ ಪ್ರಕರಣ ಮುಚ್ಚಿಹಾಕಲು ಲೋಕಾಯುಕ್ತ ಪೊಲೀಸರು ಪ್ರಯತ್ನ ಮಾಡುತ್ತಿದ್ದಾರೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ.

ಮುಡಾ ಹಗರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಆಸ್ತಿಗಳನ್ನು ವಶಪಡಿಸಿಕೊಂಡಿದ್ದರೂ, ಲೋಕಾಯುಕ್ತ ಪೊಲೀಸರು ಈ ವಿಷಯದಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ, ಕಾಂಗ್ರೆಸ್ ಸರ್ಕಾರದ ಮುಡಾ, ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣಗಳ ವಿರುದ್ಧ ಬಿಜೆಪಿ ತೀವ್ರ ಹೋರಾಟ ನಡೆಸಿದೆ, ಮುಡಾ ಹಗರಣದಲ್ಲಿ 4 ರಿಂದ 5 ಸಾವಿರ ಕೋಟಿ ರೂ. ಅಕ್ರಮ ನಡೆದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ 14 ನಿವೇಶನಗಳನ್ನು ವಾಪಸ್ ನೀಡಿರುವುದು ತಪ್ಪನ್ನು ಒಪ್ಪಿಕೊಂಡಂತಾಗಿದೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಆಗ್ರಹಿಸಲಾಗಿದೆ, ಹಗರಣದಲ್ಲಿ (5ನೇ ಪುಟಕ್ಕೆ)

## ಸಿಎಂ ಒತ್ತಡಕ್ಕೆ ಮಣಿದಿರುವ ಲೋಕಾಯುಕ್ತ: ವಿಜಯೇಂದ್ರ



ಬೆಂಗಳೂರು, ಜ. 23- ಮುಖ್ಯಮಂತ್ರಿಗಳ ಒತ್ತಡಕ್ಕೆ ಮಣಿದು ಮುಡಾ ವಿಚಾರದಲ್ಲಿ ಲೋಕಾಯುಕ್ತ ಕ್ಲೀನ್ ಚಿಟ್ ಕೊಟ್ಟಿರುವ ಸಾಧ್ಯತೆ ಇದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ .ವಿಜಯೇಂದ್ರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಂದು ವೇಳೆ ಕ್ಲೀನ್ ಚಿಟ್ ಕೊಟ್ಟಿದ್ದರೆ, ಹೋರಾಟ ಮಾಡುತ್ತೇವೆ, ಮುಖ್ಯಮಂತ್ರಿಗಳ ಒತ್ತಡಕ್ಕೆ ಮಣಿದು ಕ್ಲೀನ್ ಚಿಟ್ ನೀಡಬ ಹುದೆಂದು ಈ ಮೊದಲೇ ವ್ಯಕ್ತಪಡಿಸಿದ್ದ ಅನು ಮಾನಗಳು ಸತ್ಯವಾದಂತೆ ಕಾಣುತ್ತಿವೆ ಎಂದರು.

ಜಾರಿ ನಿರ್ದೇಶನಾಲಯ (ಇ.ಡಿ.) ಇತ್ತೀಚೆಗೆ ಪತ್ರಿಕಾ ಪ್ರಕಟಣೆ ನೀಡಿ, ಮುಡಾದಲ್ಲಿ ಎಷ್ಟು ಕೋಟಿ ರೂ. ಹಗರಣ ನಡೆದಿದೆ ಎಂಬುದನ್ನು ತಿಳಿಸಿತ್ತು, ರಾಜ್ಯ ಹೈಕೋರ್ಟ್ ಸಹ ಮುಡಾ ಹಗರಣವನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದೆ, ಮುಖ್ಯಮಂತ್ರಿ ಸೇರಿದಂತೆ ಇಡೀ ಸರ್ಕಾರ ರಾಜ್ಯಪಾಲರ ಕುರಿತು ಅವಹೇಳನಕಾರಿ ಹೇಳಿಕೆಗಳನ್ನು ನೀಡಿತ್ತು.

ಹೈಕೋರ್ಟ್ ತೀರ್ಪು ಬರುವ ವೇಳೆಯಲ್ಲೇ (4ನೇ ಪುಟಕ್ಕೆ)

## ಜಾರಕಿಹೊಳಿಗೆ ಪರ್ಯಾಯ ನಾಯಕನಾಗಿ ಶ್ರೀರಾಮುಲು

**ಇದು ಡಿಕೆಶಿ ತಂತ್ರ ಎಂದ ಜನಾರ್ದನ ರೆಡ್ಡಿ**

ಬೆಂಗಳೂರು,ಜ.23- ಲೋಕೋಪಯೋಗಿ ಸಚಿವ ಹಾಗೂ ಪರಿಶಿಷ್ಟ ಸಮುದಾಯದ ನಾಯಕ ಸತೀಶ್ ಜಾರಕಿಹೊಳಿ ಅವರಿಗೆ ಪರ್ಯಾಯವಾಗಿ ಶ್ರೀರಾಮುಲು ಅವರನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಳೆಸುತ್ತಿದ್ದಾರೆಂದು ಬಿಜೆಪಿ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಜನಾರ್ದನ ರೆಡ್ಡಿ ಇಂದಿಲ್ಲಿ ಬಾಂಬ್ ಸಿಡಿಸಿದ್ದಾರೆ.

ಪಕ್ಷ ತೊರೆದು ಕಾಂಗ್ರೆಸ್ ಸೇರುವ ಉದ್ದೇಶದಿಂದ ಶ್ರೀರಾಮುಲು ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆಂದು ದೂರಿದ್ದಾರೆ.

ಅವರು ಪಕ್ಷ ಬಿಟ್ಟು ಹೋಗುವುದಾದರೆ ಹೋಗಲಿ, ಆದರೆ, ನನ್ನ ಮೇಲೆ ಆರೋಪ ಮಾಡಿ ಹೋಗುವುದು ಬೇಡ ಎಂದು ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮುಲು ತಮ್ಮ ಕುಟುಂಬದವರೊಬ್ಬರು ಕೊಲೆಯಾದ ಸಂದರ್ಭದಲ್ಲಿ ಕ್ರಿಮಿನಲ್ ಹಾದಿ ತುಳಿಯಲು ಮುಂದಾಗಿದ್ದರು, ಅಂತಹ ಸಂದರ್ಭದಲ್ಲಿ ನಾನು ಅವರನ್ನು ಕರೆದುಕೊಂಡು ಬಂದು ಮಗುವಿನಂತೆ ಸಾಕಿದೆ.

ಆದರೆ, ಇದೀಗ ನನ್ನ ಎದೆಗೆ ಒದ್ದು ಹೊರ ಹೋಗುತ್ತಿದ್ದಾರೆ, ಅವರಿಗೆ ಶುಭವಾಗಲಿ, ಶಿವಕುಮಾರ್ ಜೊತೆ ಕೈಜೋಡಿಸುವ ಉದ್ದೇಶದಿಂದ ನನ್ನ ವಿರುದ್ಧ ಆರೋಪ ಮಾಡುವುದು ಸರಿಯಲ್ಲ ಎಂದರು.

ಕಾಂಗ್ರೆಸ್‌ನಲ್ಲಿ ಸತೀಶ್ ಜಾರಕಿಹೊಳಿ ಒಬ್ಬರೇ (4ನೇ ಪುಟಕ್ಕೆ)

## ಮೆಣಸಿನಕಾಯಿ ಪುಡಿ ವಾಪಸ್‌ಗೆ ಪತಂಜಲಿ ಫುಡ್ಸ್‌ಗೆ ಸೂಚನೆ

ನವದೆಹಲಿ, ಜ. 23 - ನಿರ್ದಿಷ್ಟ ತಂಡದ ಮೆಣಸಿನಕಾಯಿ ಪುಡಿ ಆಹಾರ ಸುರಕ್ಷತಾ ಮಾನದಂಡಗಳಿಗೆ ಅನುಗುಣವಾಗಿಲ್ಲ ಎಂದು ಹೇಳಿರುವ ಆಹಾರ ನಿಯಂತ್ರಕ ಎಫ್‌ಎಸ್‌ಎಸ್‌ಎಐ, ಈ ಮೆಣಸಿನಕಾಯಿ ಪುಡಿಯನ್ನು ವಾಪಸ್ ಪಡೆಯುವಂತೆ ಪತಂಜಲಿ ಫುಡ್ಸ್‌ಗೆ ತಿಳಿಸಿದೆ.

ಕಳೆದ ಜನವರಿ 13ರಂದು ಈ ಬಗ್ಗೆ ಆದೇಶ ಹೊರಡಿಸಲಾಗಿದೆ.



## ಭದ್ರಾ ಮೇಲ್ದಂಡೆ ಕಾಮಗಾರಿ ಸ್ಥಗಿತವಾಗಿಲ್ಲ

### ಗುತ್ತಿಗೆದಾರರಿಗೆ ಈ ವರ್ಷ 800 ಕೋಟಿ ಪಾವತಿಸಲಾಗಿದೆ: ಸಿಎಂ ಸಿದ್ದರಾಮಯ್ಯ

ಚಿತ್ರದುರ್ಗ, ಜ 23- ಭದ್ರಾ ಮೇಲ್ದಂಡೆ ಕಾಮಗಾರಿಗಳು ಸ್ಥಗಿತವಾಗಿಲ್ಲ. ಆದರೆ ಶೀಘ್ರಗತಿಯಲ್ಲಿ ಕಾಮಗಾರಿಗಳು ನಡೆಯುತ್ತಿಲ್ಲ. ಗುತ್ತಿಗೆದಾರಿಗೆ ಈ ವರ್ಷ 800 ಕೋಟಿಗಳನ್ನು ಪಾವತಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಗುರುವಾರ ಮಾಧ್ಯಮದವರೊಂದಿಗೆ ಮಾತನಾಡುತ್ತಾ, ಭದ್ರಾ ಮೇಲ್ದಂಡೆ ಯೋಜನೆಗೆ ಹಣ ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದರು.

ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರೂ.ಗಳನ್ನು ನೀಡುವುದಾಗಿ 2023-24 ರ ಕೇಂದ್ರ ಬಜೆಟ್‌ನಲ್ಲಿ ವಿತ್ತ ಸಚಿವೆ ನಿರ್ಮಲ ಸೀತಾರಾಮನ್ ಅವರು ಘೋಷಿಸಿದ್ದರು. ಅದೇ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿಯವರು ತಮ್ಮ ಬಜೆಟ್ ನಲ್ಲಿಯೂ ಇದನ್ನು ಪುನರುಚ್ಚರಿಸಿದ್ದರು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡುವುದಾಗಿ ಹೇಳಿದ್ದರು. ಇಷ್ಟು ವರ್ಷಗಳಾದರೂ ಒಂದು ಪೈಸೆಯೂ ರಾಜ್ಯಕ್ಕೆ ಬಂದಿಲ್ಲ ಎಂದರು.

ನಬಾರ್ಡ್ ನಲ್ಲಿ ರಾಜ್ಯಕ್ಕೆ ಬರಬೇಕಾದ ಸಾಲದ ಮೊತ್ತ ಕಡಿತವಾಗಿರುವ ಹಿನ್ನೆಲೆಯಲ್ಲಿ ಇತ್ತೀಚೆಗೆ ನಿರ್ಮಲ ಸೀತಾರಾಮನ್ ಅವರನ್ನು ಭೇಟಿ ಮಾಡಿದಾಗಲೂ ಈ ವಿಷಯವನ್ನು ಪ್ರಸ್ತಾಪಿಸಲಾಯಿತು. ಆದರೆ ಇಂದಿನವರೆಗೂ ಒಂದು ರೂಪಾಯಿ ಬಿಡುಗಡೆಯಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೊಸದುರ್ಗ ತಾಲ್ಲೂಕಿನ ಹಿನ್ನೀರಿನಲ್ಲಿ ರೈತರ ಜಮೀನು ಮುಳುಗಡೆಯಾಗಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ ಮುಳುಗಡೆಯಾಗದ ರೀತಿಯಲ್ಲಿ ತಡೆಯುವ ಪ್ರಯತ್ನವನ್ನು ಸರ್ಕಾರ ಮಾಡಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ವಾಣಿ ವಿಲಾಸ ಸಾಗರ ಅಣೆಕಟ್ಟೆಗೆ 115 ವರ್ಷಗಳ ಇತಿಹಾಸವಿದೆ. ಇಷ್ಟು ವರ್ಷಗಳಲ್ಲಿ ಈ ಅಣೆಕಟ್ಟು ಕೋಡಿ ಬಿದ್ದಿರುವುದು ಮೂರು ಬಾರಿ ಮಾತ್ರ. ಕರ್ನಾಟಕದ ಮೊದಲನೇ ಜಲಾಶಯ ಇದಾಗಿದ್ದು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಾಯಿ ಸಂಪಾಜಮ್ಮಣಿಯವರ ಹೆಸರಿನಲ್ಲಿ ಕಟ್ಟಿಸಿದ್ದು, ವಾಣಿ ವಿಲಾಸ ಸಾಗರ ಎಂದು ಕರೆಯಲಾಗಿದೆ. 30.ಟಿ.ಎಂ.ಸಿ ನೀರು ಶೇಖರಣೆ ಮಾಡುವ ಸಾಮರ್ಥ್ಯವಿರುವ ಅಣೆಕಟ್ಟು 33 ಸಾವಿರ ಎಕರೆಗೆ ನೀರುಣಿಸುತ್ತದೆ ಎಂದರು.

## 15 ಸಾವಿರ ಕೋಟಿ ರೂ. ನಟ ಸೈಫ್ ಆಸ್ತಿ ಬಗ್ಗೆ ಅನಿಶ್ಚಿತತೆ



ಭೂಪಾಲ್, ಜ. 23 - ಭೂಪಾಲದ ಹಿಂದಿನ ಮಹಾರಾಜರಿಗೆ ಸೇರಿದ ಹಾಗೂ ನಟ ಸೈಫ್ ಅಲಿ ಖಾನ್ ಕುಟುಂಬ ಉತ್ತರಾಧಿಕಾರ ಹೊಂದಿರುವ 15 ಸಾವಿರ ಕೋಟಿ ರೂ. ಆಸ್ತಿ ವಿಷಯ ಈಗ ಅನಿಶ್ಚಿತತೆಗೆ ಸಿಲುಕಿದೆ.

ಶತ್ರು ಆಸ್ತಿ ನಿರ್ವಹಣಾ ಕಚೇರಿಯ ಆದೇಶದ ವಿರುದ್ಧ ಕುಟುಂಬ ಇನ್ನೂ ಮೇಲ್ಮನವಿ ಸಲ್ಲಿಸಿಲ್ಲ. ಇದು ಅನಿಶ್ಚಿತತೆಗೆ ಕಾರಣವಾಗಿದೆ ಎಂದು ವಕೀಲರು ಹೇಳಿದ್ದಾರೆ.

ಹಿಂದಿನ ರಾಜಮನೆತನಕ್ಕೆ ಸೇರಿದ ನೂರ್ - ಅಸ್ - ಸಬಾಹ್ ಅರಮನೆ, ದರ್-ಉಸ್-ಸಲಾಮ್, ಹಬೀಬಿ ಬಂಗಲೆ, ಅಹಮದಾಬಾದ್ ಅರಮನೆ ಹಾಗೂ ಫ್ಲಾಗ್ ಸ್ಟಾಫ್ ಹೌಸ್ ಪ್ರಕರಣದಲ್ಲಿ ಸಿಲುಕಿವೆ.

ಈ ಆಸ್ತಿಗಳನ್ನು ಲಕ್ಷಾಂತರ ಜನರು ಮಾಲೀಕರಾಗಿ ಹಾಗೂ ಬಾಡಿಗೆದಾರರಾಗಿ ವಶಪಡಿಸಿಕೊಂಡಿದ್ದಾರೆ. ಇವರ ಮುಂದಿನ ಭವಿಷ್ಯ ಸಹ ಈಗ ಅನಿಶ್ಚಿತವಾಗಿದೆ.

1965 ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ನಡೆದ ನಂತರ ಕೇಂದ್ರ ಸರ್ಕಾರ ಶತ್ರು ಆಸ್ತಿ ಕಾಯ್ದೆ ಜಾರಿಗೆ (4ನೇ ಪುಟಕ್ಕೆ)

## ಸಾಫ್ಟ್‌ವೇರ್, ಬೆಲೆ ವ್ಯತ್ಯಾಸ: ಆಪಲ್, ಓಲಾ, ಊಬರ್ ವಿರುದ್ಧ ನೋಟಿಸ್

ನವದೆಹಲಿ, ಜ. 23- ಸಾಫ್ಟ್‌ವೇರ್ ಕಾರ್ಯನಿರ್ವಹಣೆ ಹಾಗೂ ಬೆಲೆ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಗ್ರಾಹಕರು ನೀಡಿರುವ ದೂರುಗಳನ್ನು ಆಧರಿಸಿ ಆಪಲ್, ಓಲಾ ಹಾಗೂ ಊಬರ್‌ಗಳ ವಿರುದ್ಧ ಗ್ರಾಹಕರ ರಕ್ಷಣಾ ಪ್ರಾಧಿಕಾರ ನೋಟಿಸ್ ಕಳಿಸಿದೆ.

ಐಫೋನ್‌ನ ಇತ್ತೀಚಿನ ಸಾಫ್ಟ್‌ವೇರ್ ಅಪ್ಡೇಟ್ ಮಾಡಿಕೊಂಡ ನಂತರ ಉಂಟಾಗಿರುವ ತಾಂತ್ರಿಕ ಸಮಸ್ಯೆಗಳ ಬಗ್ಗೆ ಉತ್ತರಿಸುವಂತೆ ತಿಳಿಸಲಾಗಿದೆ. ಗ್ರಾಹಕರ ವ್ಯವಹಾರಗಳ ಸಚಿವಾಲಯ ಈ ದೂರುಗಳ ಬಗ್ಗೆ ಪರಿಶೀಲಿಸುತ್ತಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ (4ನೇ ಪುಟಕ್ಕೆ)

## ಟ್ರಂಪ್ ಆದೇಶದ ಪರಿಣಾಮ ಅಮೆರಿಕದಲ್ಲಿ ಸಿಸೇರಿಯನ್ ಧಾವಂತ

ನವದೆಹಲಿ, ಜ. 23- ಜನ್ಮಸಿದ್ಧ ಪೌರತ್ವದ ಹಕ್ಕನ್ನು ವಾಪಸ್ ಪಡೆಯಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಅಮೆರಿಕದಲ್ಲಿ ಸಿಸೇರಿಯನ್ ಭರಾಟೆ ಹೆಚ್ಚಾಗಿದೆ.

ಟ್ರಂಪ್ ಹೊರಡಿಸಿರುವ ಆದೇಶ ಫೆಬ್ರವರಿ 20ರಿಂದ ಅನ್ವಯವಾಗಲಿದೆ. ಅದಕ್ಕಿಂತ ಮೊದಲೇ ಸಿಸೇರಿಯನ್ ಮೂಲಕ ತಮ್ಮ ಮಕ್ಕಳಿಗೆ ಅಮೆರಿಕದ ಪೌರತ್ವ ದೊರೆಯುವಂತೆ ಮಾಡಲು ಹಲವು ಪೋಷಕರು ಬಯಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಅಸಾಮಾನ್ಯ ಎನಿಸುವಷ್ಟು ಸಿಸೇರಿಯನ್ ಮನವಿಗಳು ಬರುತ್ತಿವೆ ಎಂದು ನ್ಯೂಜರ್ಸಿಯಲ್ಲಿ ಕ್ಲಿನಿಕ್ ಹೊಂದಿರುವ ಡಾ. ಎಸ್.ಡಿ. ರಾಮ ತಿಳಿಸಿದ್ದಾರೆ.

8 ಹಾಗೂ 9ನೇ ತಿಂಗಳಿನ ಗರ್ಭಿಣಿಯಾಗಿರುವವರೂ ಫೆಬ್ರವರಿ 20 ಕ್ಕಿಂತ ಮುಂಚೆ ಸಿಸೇರಿಯನ್ ಬಯಸುತ್ತಿದ್ದಾರೆ. ಕೆಲವರಂತೂ 7ನೇ ತಿಂಗಳಿಗೆ ಸಿಸೇರಿಯನ್ ಬಯಸುತ್ತಿದ್ದಾರೆ ಎಂದು ರಾಮ ಹೇಳಿದ್ದಾರೆ.

ಅವಧಿಗೆ ಮುಂಚೆ ಹೆರಿಗೆ ಸಾಧ್ಯವಾದರೂ ಸಹ ತಾಯಿ ಹಾಗೂ ಮಗುವಿಗೆ ಅಪಾಯ ಹೆಚ್ಚು ಎಂದು ನಾನು ತಿಳಿಸುತ್ತಿದ್ದೇನೆ ಎಂದವರು ಹೇಳಿದ್ದಾರೆ. ಅವಧಿಗೆ ಮುಂಚೆ ಹೆರಿಗೆ ಮಾಡಿಸಿದಲ್ಲಿ ಶ್ವಾಸಕೋಶ (4ನೇ ಪುಟಕ್ಕೆ)

## ಇಂದಿಗೂ ನನಸಾಗದ ನೇತಾಜಿ ಕನಸು : ನೋವಿನ ಸಂಗತಿ

### ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರ 128ನೇ ಜನ್ಮದಿನ ಕಾರ್ಯಕ್ರಮದಲ್ಲಿ ಡಾ. ವಸುಧೇಂದ್ರ ಬೇಸರ

ದಾವಣಗೆರೆ, ಜ.23- ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಕನಸು ಇಂದಿಗೂ ನನಸಾಗಿಲ್ಲ. ಇದು ಅತ್ಯಂತ ನೋವಿನ ಸಂಗತಿ. ನೇತಾಜಿಯವರ ಎಚ್ಚರಿಕೆಗಳಿಗೆ ಅಂದೇ ಗಮನ ಕೊಟ್ಟಿದ್ದಿದ್ದರೆ, ಬ್ರಿಟಿಷರಿಂದ ಶ್ರೀಮಂತ ಭಾರತೀಯ ಬಂಡವಾಳಶಾಹಿಗಳಿಗೆ ಅಧಿಕಾರ ವರ್ಗಾವಣೆಯಾಗುವ ದುರಂತವನ್ನು ತಪ್ಪಿಸಬಹುದಿತ್ತು ಎಂದು ಮೆಡಿಕಲ್ ಸರ್ವೀಸ್ ಸೆಂಟರ್‌ನ ರಾಜ್ಯ ಕಾರ್ಯದರ್ಶಿ ಡಾ.ವಸುಧೇಂದ್ರ ಬೇಸರ ವ್ಯಕ್ತಪಡಿಸಿದರು.

ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಎಐಡಿವೈಓ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 128ನೇ ಜನ್ಮದಿನ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಆಗಮಿಸಿ ಅವರು ಮಾತನಾಡಿದರು.




ಆದರೆ, ಇಂದು ಕೋಟ್ಯಾಂತರ ಜನಸಾಮಾನ್ಯರ ದುಡಿಮೆಯ ಫಲದ ಬಹುಪಾಲನ್ನು ಕೆಲವೇ ಮಂದಿ ಬಂಡವಾಳಿಗರು ಕಬಳಿಸುತ್ತಿದ್ದಾರೆ. ಈ ಅಸಮಾನತೆಯ ವ್ಯವಸ್ಥೆಯನ್ನು ಕಿತ್ತೊಗೆಯಲು ವಿದ್ಯಾರ್ಥಿ-ಯುವಜನರು ಹೋರಾಟಗಳನ್ನು ಕಟ್ಟಬೇಕೆಂದು ಅವರು ಕರೆ ನೀಡಿದರು.

ಎಐಡಿವೈಓ ಜಿಲ್ಲಾ ಸಂಚಾಲಕ ಪರಶುರಾಮ್ ಮಾತನಾಡಿ, ಚುನಾವಣಾ ಸಮಯದಲ್ಲಿ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳಿಗೆ ಕೋಟಿ ಕೋಟಿ ದೇಣಿಗೆ ನೀಡುವ ಈ ಬಂಡವಾಳಿಗರು, ಸರ್ಕಾರದ ನೀತಿ-ನಿರೂಪಣೆ, ಕಾನೂನುಗಳು (4ನೇ ಪುಟಕ್ಕೆ)

# ಹೆಣ್ಣು ಮಕ್ಕಳು ನಗುವ ಹೂಗಳು

## (ಇಂದು ರಾಷ್ಟ್ರೀಯ ಹೆಣ್ಣುಮಕ್ಕಳ ದಿನದ ನಿಮಿತ್ತ ಈ ಲೇಖನ)

***'ಭೂಮಿ ನೀನು ಸಹನೆಯಲಿ***
***ಬೆಂಕಿ ನಿನ್ನ ಉಸಿರಿನಲಿ***
***ಯಾರಿಗೆ ಹೋಲಿಸಲಿ***
***ಕ್ಷಮೆಯ ಧರಿತ್ರಿ ಎನ್ನಲೇ'***

ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳು ಎದುರಿಸುತ್ತಿರುವ ಅಸಮಾನತೆ, ಶೋಷಣೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು 2008ರಲ್ಲಿ ಈ ದಿನಾಚರಣೆ ಆರಂಭವಾಯಿತು. ಲಿಂಗ ತಾರತಮ್ಯ ನಿವಾರಿಸಲು ಹೆಣ್ಣು ಮಕ್ಕಳನ್ನು ಓದಿಸಿ ಬೆಳೆಸಿ ಪ್ರೋತ್ಸಾಹಿಸಬೇಕು. ಅವರ ಆರೋಗ್ಯ, ಶಿಕ್ಷಣದಲ್ಲಿ ತುಂಬಾ ಸುಧಾರಣೆ ತರಲು ಹಾಗೂ ಭ್ರೂಣ ಹತ್ಯೆ ತಡೆಯಲು ಇಂತಹ ದಿನಾಚರಣೆಗಳು ಅತ್ಯಗತ್ಯ.

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎನ್ನುವ ಹಾಗೆ ಹೆಣ್ಣಿಗೆ ಶಿಕ್ಷಣ ತುಂಬಾ ಮುಖ್ಯ. ಬದುಕಿನಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸಿ, ಸಮಾಜದ ಕಣ್ಣಾಗಿ ಇಂದು ಎಲ್ಲಾ ಕ್ಷೇತ್ರಗಳಲ್ಲೂ ಆಕೆ ತನ್ನ ಛಾಪು ಮೂಡಿಸಿದ್ದಾಳೆ. ಹಾಗಾಗಿ ಅವಳನ್ನು ಗೌರವಿಸಿ, ಅವಳ ಹಕ್ಕುಗಳನ್ನು ರಕ್ಷಿಸಬೇಕು.ಹೆಣ್ಣೆಂಬ ಕಾರಣಕ್ಕೆ ಅವಳನ್ನು ತಾತ್ಸಾರದಿಂದ ನೋಡುವ ಗುಣವನ್ನು ದೂರ ಮಾಡಬೇಕು.

ಹೆಣ್ಣು ತಾಯಿ, ತಂಗಿ, ಹೆಂಡತಿ, ಮಗಳು, ಗೆಳತಿ ಹೀಗೆ ಹಲವು ರೂಪಗಳಲ್ಲಿ ಗಂಡಿಗೆ ಸಹಕಾರಿಯಾಗಿರುತ್ತಾಳೆ. ಪ್ರತಿಯೊಬ್ಬರ ಜೀವನದಲ್ಲೂ ಆಕೆಯ ಪಾತ್ರ ತುಂಬಾನೇ ಮುಖ್ಯ ಆಗಿರುತ್ತದೆ.ಅವಳನ್ನು ಎಂತಹ ಪರಿಸ್ಥಿತಿಯಲ್ಲೂ ಕಾಪಾಡುವ ಗುರುತರ ಜವಾಬ್ದಾರಿ ನಮ್ಮದಾಗಬೇಕು.

ಈ ದಿನ ಅವಳ ಸಾಧನೆ ಗುರುತಿಸಿ ಗೌರವಿಸಲಾಗುತ್ತದೆ. ಅವಳನ್ನು ಅವಮಾನ, ಶೋಷಣೆ, ಕೌಟುಂಬಿಕ ದೌರ್ಜನ್ಯದಿಂದ ಮುಕ್ತಗೊಳಿಸಬೇಕು. ಎಲ್ಲರಂತೆ ಸ್ವತಂತ್ರವಾಗಿ ದುಡಿದು ತಿನ್ನುವ ಹಕ್ಕನ್ನು ಒದಗಿಸಿ ಅದರಂತೆ ಬಾಳಲು ಅವಕಾಶ ನೀಡಬೇಕು.

ಹೆಣ್ಣಲ್ಲವೇ ನಮ್ಮನ್ನು ಪಡೆದ ತಾಯಿ, ಹೆಣ್ಣಲ್ಲವೇ ನಮ್ಮನ್ನೆಲ್ಲ ಪೊರೆದವಳು ಎಂಬ ಸಂಚಿಯ ಹೊನ್ನಮ್ಮನ ಗೀತೆಯನ್ನು ನಾವು ಮರೆಯುವಂತಿಲ್ಲ. ಈ ದಿನಾಚರಣೆಯು ಅವಳು ಶಿಕ್ಷಣವನ್ನು ಪ್ರವೇಶಿಸುವ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಅವಕಾಶ ನೀಡುವುದಕ್ಕಾಗಿಯೇ ಆಗಿದೆ. ಹೊಂಬೆಳಕಿನ ಉಜ್ವಲ ನಾಳೆಗಾಗಿ ಹೆಣ್ಣನ್ನು ಸಬಲೀಕರಣ ಗೊಳಿಸುವುದು ನಮ್ಮ ಹೊಣೆ.

ಹೆಣ್ಣೆಂದರೆ ಅವಳೊಂದು ಬೆಲೆ ಕಟ್ಟಲಾಗದ ಉಡುಗೊರೆ. ಅಪ್ಪನೆದೆಯ ಮೇಲೆ ಬೆಳೆದ ಹೃದಯವಂತೆ. ಅವಳ ಕನಸಿಗೆ ನಾವು ಬಣ್ಣ ಹಚ್ಚಿ ರೆಕ್ಕೆಯಾಗಿ ಮುಗಿಲೆತ್ತರಕ್ಕೆ ಹಾರಿಸೋಣ.ಅವಳೊಂದು ಮೇರು ಪ್ರತಿಭೆ ಎಂಬುದನ್ನು ಅರಿಯೋಣ.

ಹೆಣ್ಣು ಮಕ್ಕಳು ಶಿಕ್ಷಣ ಪಡೆದಾಗ ದೇಶಗಳು ಬಲಿಷ್ಠವಾಗುತ್ತವೆ ಮತ್ತು ಹೆಚ್ಚು ಸಮೃದ್ಧವಾಗುತ್ತವೆ ಎಂಬ ಮಾತನ್ನು ನೆನೆಯೋಣ. ಅವಳು ಜಾಗೃತಳಾದರೆ ಭವಿಷ್ಯ ಉಜ್ವಲ. ಅವಳಿಗೆ ಮಹತ್ವವಾದ ಒಂದನ್ನು ಸಾಧಿಸುವ ಸಾಮರ್ಥ್ಯವಿರುತ್ತದೆ. ಅದಕ್ಕಾಗಿ ನಾವು ಅವಳನ್ನು ಬೆಂಬಲಿಸಬೇಕು. ಹಾಗೂ ಅಗತ್ಯವಿರುವ ಸಂಪನ್ಮೂಲಗಳನ್ನು ಒದಗಿಸಬೇಕು. ಅವಳ ವೈಯಕ್ತಿಕ ಹಾಗೂ ವೃತ್ತಿಪರ ಬೆಳವಣಿಗೆಗೆ ಅವಕಾಶ ನೀಡಬೇಕು. ಅವಳ ಉತ್ತಮ ಕಾರ್ಯಗಳಿಗೆ ಕೈ ಜೋಡಿಸಬೇಕು.

ಅವಳು ಇಡೀ ಕುಟುಂಬ ಹಾಗೂ ಸಮಾಜಕ್ಕೆ ಮಾದರಿಯಾಗುವಂತಹ ಬದುಕು ಕಟ್ಟಿಕೊಂಡಿದ್ದಾಳೆ. ಬದಲಾದ ಕಾಲದಲ್ಲಿ ಹೊಸತನಗಳಿಗೆ ತನ್ನನ್ನು ಒಗ್ಗಿಸಿಕೊಳ್ಳುತ್ತಾ ತನ್ನ ಪ್ರತಿಭೆಯನ್ನು ಬೆಳಗಿಸುತ್ತಾ ಬೆಳಕಾಗಿದ್ದಾಳೆ. ಉಳಿಸೋಣ ಅವಳನ್ನ. ಮಾಡೋಣ ಜೋಪಾನ. ಅವಳಿಲ್ಲದ ನಾಳೆ ಶೂನ್ಯ.



**- ಉಷಾ ಈ.**
ಕನ್ನಡ ಉಪನ್ಯಾಸಕರು,
ಎ.ಜಿ.ಬಿ. ಕಾಲೇಜು,
ದಾವಣಗೆರೆ. 9844572738




ರಾಷ್ಟ್ರೀಯ ಹೆಣ್ಣು ಮಕ್ಕಳ ದಿನ,
ಮಹಿಳಾ- ಮಕ್ಕಳ ಅಭಿವೃದ್ಧಿಯ ಧ್ಯೇಯ,
ಬೆಂಬಲ ಅವಕಾಶಗಳನ್ನು ನೀಡುವ ಉದ್ದೇಶ..,
ಹೆಣ್ಣು ಮಗುವನ್ನು ಉಳಿಸುವ ಸಂದೇಶ.

ಹೆಣ್ಣು ಮಕ್ಕಳ ರಕ್ಷಣೆಯ ಯೋಜನೆ
ಆರೋಗ್ಯ- ಜೀವನ ಶೈಲಿಯ ಸುಧಾರಣೆ
ನಿಷಿದ್ಧವಾಗಲಿ ಪಿಡುಗೆಂಬ ವರದಕ್ಷಿಣೆ
ಕ್ಷೀಣಿಸುತ್ತಿರುವ ಹೆಣ್ಣು ಮಗುವಿನ ಸಂತತಿ -
ಭ್ರೂಣಹತ್ಯೆ ಹೊಣೆ

ಅನಕ್ಷರತೆ- ಬಾಲ್ಯವಿವಾಹ- ತಾರತಮ್ಯ ..,
ನಿಲ್ಲಲಿ ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ,
ಹಕ್ಕುಗಳ ಬಗೆಗೆ ಜಾಗೃತಿ,
ಹೆಣ್ಣು ಮನೆ- ಮನಸ್ಸಿನ ಜ್ಯೋತಿ.

ಬಗೆಹರಿಸಿ ಸಮಸ್ಯೆಗಳ- ಒದಗಿಸುವ ನ್ಯಾಯ,
ಅರಿಯಿರಿ ಹೆಣ್ಣು ಮಗುವಿನ ಮಹತ್ವ- ಅವಳ ಪರಿಚಯ,
ಸಮಾನ ಹಕ್ಕುಗಳಿಗೆ ಸಮಾವೇಶ
ಜನರ ಪ್ರಜ್ಞೆಯನ್ನು ಹೆಚ್ಚಿಸುವ ಧ್ಯೇಯೋದ್ದೇಶ.

ಹೆಣ್ಣು ಮಕ್ಕಳಿಗೆ ಶಿಕ್ಷಣ- ಆದ್ಯತೆ.
ಅರ್ಹತೆ ಪ್ರಾಮುಖ್ಯತೆಗಳಿಗಿರಲಿ- ಖಾತೆ,
ಅಳಿಯಲಿ, ಅವನು- ಅವಳೆಂಬ ಅಸಮಾನತೆ..,
ನಡುರಾತ್ರಿಯಲ್ಲಿಯೂ ನಲಿಯಲಿ ಸುರಕ್ಷತೆ.

**ಡಾ|| ದೀಪಶ್ರೀ ಪ್ರಮೋದ್ ಗುಜ್ಜರ್**
ಉಪನ್ಯಾಸಕಿ, ಬಾಪೂಜಿ ದಂತ ವೈದ್ಯಕೀಯ
ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ದಾವಣಗೆರೆ

# ಸಂಸದರ ಸಮಯಾವಕಾಶಕ್ಕೆ ಕಾಯುವುದು ಸಲ್ಲದು

ಹರಿಹರ, ಜ. 23- ತಾಲ್ಲೂಕಿನ ವಿವಿಧ ಇಲಾಖಾಧಿಕಾರಿಗಳು ನಾನಾ ಯೋಜನೆ, ಕಟ್ಟಡಗಳ ಉದ್ಘಾಟನಾ ಸಮಾರಂಭ ಆಯೋಜಿಸಲು ಸಂಸದರ ಸಮಯಾವಕಾಶಕ್ಕಾಗಿ ಕಾಯುವುದು ಸರಿಯಲ್ಲ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ತಾ.ಪಂ. ಸಭಾಂಗಣದಲ್ಲಿ ಮಂಗಳವಾರ ನಡೆದ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸರ್ಕಾರಿ ಕಾರ್ಯಕ್ರಮಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರಿಗಾಗಿ ಕಾಯಬೇಕೇ ಹೊರತು, ಸಂಸದರಿಗಲ್ಲ. ಸಂಸದರು ಕಾರ್ಯಕ್ರಮಗಳಲ್ಲಿ ಉಪಸ್ಥಿತರಿರುತ್ತಾರಷ್ಟೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವರಿಗಾದರೆ ಒಂದೆರಡು ದಿನ ಕಾಯಬಹುದು, ಇದರ ಜೊತೆಗೆ ಶಾಸಕರಿಗೂ ಗೌರವ ಕೊಡಬೇಕು, ಸಂಸದರು ಸಮಯಾವಕಾಶ ಕೊಟ್ಟಿಲ್ಲ, ಸಂಸದರು ಅವತ್ತು ಬರುತ್ತಾರೆ, ಇವತ್ತು ಬರುತ್ತಾರೆ ಎಂಬ ಸಬೂಬನ್ನು ಇನ್ನು ಮುಂದೆ ನಾನು ಕೇಳಲ್ಲ ಎಂದು ಅವರು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ಸಭಾ ಸೂಚನಾ ಪತ್ರದಲ್ಲಿ ಶಾಸಕರು ಹಾಗೂ ಆಡಳಿತಾಧಿಕಾರಿಯವರ ಹೆಸರಿನ ಜೊತೆಗೆ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್‌ರವರ ಹೆಸರು ಇದ್ದ ವಿಷಯ ಪ್ರಸ್ತಾಪಿಸಿದ ಶಾಸಕರು, ಈ ಸೂಚನಾ ಪತ್ರ ಸಿದ್ಧಪಡಿಸುವ ಜವಾಬ್ದಾರಿ ಯಾರದ್ದು ? ಎಂದು ಪ್ರಶ್ನಿಸಿದರು.

ಆಗ ಸಭೆಯಲ್ಲಿದ್ದ ಸಿಬ್ಬಂದಿ ಸಲೀಂ ಎಂಬುವರು ಎದ್ದು ಕೇಸ್ ವರ್ಕರ್ ಮೊಹಮ್ಮದ್



## ಶಾಸಕ ಬಿ.ಪಿ. ಹರೀಶ್

ಅಲಿ ಎಂದರು. ಆಗ ಮೊಹಮ್ಮದ್ ಎಂಬುವರನ್ನು ಸಭೆಗೆ ಕರೆಯಿಸಿದರು, ತಪ್ಪು ಮಾಡಿರುವ ಮೊಹಮ್ಮದರನ್ನು ಸಸ್ಪೆಂಡ್ ಮಾಡಲು ಕ್ರಮಕೈಗೊಳ್ಳಿರಿ ಎಂದು ಇಒ ಸುಮಲತಾ ಎಸ್.ಪಿ. ಇವರಿಗೆ ತಾಕೀತು ಮಾಡಿದರು.

ನಂತರ ತಮ್ಮ ಸಿಟ್ಟಿನ ಮಾತನ್ನು ಮುಂದುವರೆಸಿದ ಶಾಸಕರು, ಮೊಹಮ್ಮದ್ ಮತ್ತು ಸಲೀಂ, ನಿಮ್ಮ ಕರ್ತವ್ಯದ ಅವಧಿ ಮುಗಿದ ನಂತರ ಅವರ ಮನೆಗೆ (ಸಂಸದರು) ಹೋಗಿ ಕಸ ಹೊಡೆಯಿರಿ, ಅದು ನನಗೆ ಸಂಬಂಧಿಸಿದ್ದಲ್ಲ, ಆದರೆ ಕಚೇರಿಯಲ್ಲಿ ಸರಿಯಾಗಿ ಕಾರ್ಯ ನಿರ್ವಹಿಸಿರಿ ಎಂದು ಎಚ್ಚರಿಸಿದರು.

ನಂತರ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ ಎಇಇ ಗಿರೀಶ್‌ರನ್ನು ಉದ್ದೇಶಿಸಿ, ತಾಪಂ ಇಒ ನಿಗದಿ ಮಾಡಿದ ಏಜೆನ್ಸಿಯವರಿಗೆ ನೀವು ಕಾಮಗಾರಿ ಕೊಡುವುದು ಬಿಟ್ಟು, ಇವರು ಕಾಂಗ್ರೆಸ್ಸಿನವರು, ಇವರು ಬಿಜೆಪಿಯವರು ಎಂದು ಕಾಮಗಾರಿ ನೀಡುವಲ್ಲಿ ತಾರತಮ್ಯ ಮಾಡುತ್ತೀರ, ಇದೆಲ್ಲವನ್ನು ನಾನು ಸಹಿಸುವುದಿಲ್ಲ ಎಂದು ತಾಕೀತು ಮಾಡಿದರು.

ಈ ಕ್ಷೇತ್ರದ ಶಾಸಕನಾಗಿ ನನಗೆ ನೀಡಬೇಕಾದ ಗೌರವ ನೀಡಬೇಕು, ಯಾರದ್ದೂ ಮಾತು ಕೇಳಬೇಡಿರಿ, ನಾನು ಈ ಹಿಂದೆ ಮಾಜಿ ಶಾಸಕನಿದ್ದಾಗ ಬಿಜೆಪಿ ಸರ್ಕಾರವಿದ್ದಾಗ ಕ್ಷೇತ್ರಕ್ಕೆ ವಿಶೇಷ ಅನುದಾನ ತರಿಸಿದ್ದೇನೆ, ಪಾಪರ್ ಆಗಿರುವ ಈ ಸರ್ಕಾರದಲ್ಲಿ ತಾಕತ್ತಿದ್ದರೆ ಅವರೂ ವಿಶೇಷ ಅನುದಾನ ತರಿಸಲಿ ಎಂದು ತಾಲ್ಲೂಕಿನ ಕಾಂಗ್ರೆಸ್ ಮುಖಂಡರ ಹೆಸರು ಪ್ರಸ್ತಾಪಿಸದೇ ಹೇಳಿದರು.

ಈಚೆಗೆ ನಗರಸಭೆ ಆವರಣದಲ್ಲಿ ದೂಡಾ ಶಾಖಾ ಕಚೇರಿ ಉದ್ಘಾಟನಾ ಸಮಾರಂಭದ ಸೂಚನಾ ಪತ್ರದಲ್ಲಿ ತಮ್ಮ ಹೆಸರು ಪ್ರಕಟಿಸುವಲ್ಲಿ ಅಗೌರವ ಸೂಚಿಸಲಾಗಿದೆ ಎಂದು ನಗರಸಭೆ ಪೌರಾಯುಕ್ತ ಸುಬ್ರಹ್ಮಣ್ಯ ಶ್ರೇಷ್ಠಿಯವರನ್ನು ಶಾಸಕರು ತೀವ್ರ ತರಾಟೆಗೆ ತೆಗೆದುಕೊಂಡಿದ್ದರು.

# 15 ಸಾವಿರ ಕೋಟಿ ರೂ. ಸೈಫ್ ಆಸ್ತಿ ಬಗ್ಗೆ ಅನಿಶ್ಚಿತತೆ

**(3ನೇ ಪುಟದಿಂದ)** ತಂದಿತ್ತು. ಪಾಕಿಸ್ತಾನಕ್ಕೆ ತೆರಳಿದವರು ಭಾರತದಲ್ಲಿ ಬಿಟ್ಟು ಹೋಗಿರುವ ಆಸ್ತಿಗಳ ನಿಯಂತ್ರಣಕ್ಕೆ ಈ ಕಾಯ್ದೆ ಜಾರಿಗೆ ತರಲಾಗಿತ್ತು. ಈ ಕಾಯ್ದೆಯ ವ್ಯಾಪ್ತಿಗೆ ಸೈಫ್ ಕುಟುಂಬದವರ ಆಸ್ತಿಗಳು ಸೇರ್ಪಡೆಯಾಗುವ ಬಗ್ಗೆ ವಿವಾದ ಉಂಟಾಗಿದೆ. ಭೂಪಾಲದ ನವಾಬರ ವಂಶಸ್ಥರು ನಿಗದಿತ ಸಮಯದಲ್ಲಿ ಮೇಲ್ಮನವಿ ಸಲ್ಲಿಸದೇ ಇದ್ದರೆ ಆಸ್ತಿಗಳು ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ಬರಲಿವೆ ಎಂದು ವಕೀಲರು ತಿಳಿಸಿದ್ದಾರೆ.

ನವಾಬ್ ಮೊಹಮ್ಮದ್ ಹಮೀದುಲ್ಲ ಅವರ ಹಿರಿಯ ಮಗಳು ಅಬಿದ ಸುಲ್ತಾನ ಬೇಗಂ ಅವರು ದೇಶ ವಿಭಜನೆಯ ನಂತರ ಪಾಕಿಸ್ತಾನಕ್ಕೆ ತೆರಳಿದ್ದರು ಹೀಗಾಗಿ ನವಾಬ್ ಎಲ್ಲಾ ಆಸ್ತಿ ಶತ್ರು ಆಸ್ತಿ ಎಂದು ಪರಿಗಣಿಸಲಾಗಿತ್ತು.

ಆದರೆ ಜನವರಿ 10, 1962 ರಲ್ಲಿ ಹಮೀದುಲ್ಲ ಅವರ ಇನ್ನೋರ್ವ ಪುತ್ರಿ ಸಾಜಿದ ಸುಲ್ತಾನ ಬೇಗಮ್ ಅವರು ನವಾಬರ ಎಲ್ಲಾ ಖಾಸಗಿ ಆಸ್ತಿ, ಚರಾಸ್ತಿ ಹಾಗೂ ಸ್ಥಿರಾಸ್ತಿಗಳ ಉಸ್ತುವಾರಿ ಎಂದು ಕೇಂದ್ರ ಸರ್ಕಾರ ಪರಿಗಣಿಸಿತ್ತು ಎಂದು ಕುಟುಂಬದ ಪರ ವಕೀಲ ಜಗದೀಶ್ ಚವನಿ ಹೇಳಿದ್ದಾರೆ. ನವಾಬ್ ಹಮೀದುಲ್ಲ ಅವರ ಎರಡನೇ ಪುತ್ರಿ ಸಾಜಿದ ಸುಲ್ತಾನ ಬೇಗಮ್ ಅವರಿಗೆ ಆಸ್ತಿ ನೀಡುವ ಬಗ್ಗೆ ಕೇಂದ್ರ ಸರ್ಕಾರ ಯಾವುದೇ ಆಕ್ಷೇಪ ಹೊಂದಿರಲಿಲ್ಲ ಎಂದು ವಕೀಲರು ಹೇಳಿದ್ದಾರೆ. ನಂತರ ಸಾಜಿದ ಅವರ ಪುತ್ರ ಮನ್ಸೂರ್ ಅಲಿ ಖಾನ್ ಪಟೌಡಿ ಅವರು ಈ ಆಸ್ತಿಗಳ ಉತ್ತರಾಧಿಕಾರಿ ಆಗಿದ್ದರು. ನಂತರ ಸೈಫ್ ಈ ಆಸ್ತಿಗಳ ಉಸ್ತುವಾರಿ ಹೊಂದಿದ್ದಾರೆ ಎಂದು ಚವನಿ ತಿಳಿಸಿದ್ದಾರೆ.

ಆದರೆ ಶತ್ರು ಆಸ್ತಿ ನಿರ್ವಹಣಾ ಕಚೇರಿ ಹೊರಡಿಸಿರುವ ಆದೇಶದ ಹಿನ್ನೆಲೆಯಲ್ಲಿ ಈ ಆಸ್ತಿ ವಿವಾದಕ್ಕೆ ಸಿಲುಕಿತ್ತು. ನಂತರ ಶರ್ಮಿಳ ಟ್ಯಾಗೋರ್ ಅವರು 2018ರಲ್ಲಿ ಹೈಕೋರ್ಟ್ ಮೊರೆ ಹೋಗಿದ್ದರು.

ಆಗ ವಾದ ಮಂಡಿಸಿದ್ದ ಸರ್ಕಾರದ ಪರ ವಕೀಲರು, 2017ರ ಶತ್ರು ಆಸ್ತಿ ಕಾಯ್ದೆಯ ಪ್ರಕಾರ ಈ ವಿವಾದ ಇತ್ಯರ್ಥಪಡಿಸಲು ಮೇಲ್ಮನವಿ ಪ್ರಾಧಿಕಾರ ಸ್ಥಾಪಿಸಲಾಗಿದೆ ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ಡಿಸೆಂಬರ್ 13, 2024ರಲ್ಲಿ ಆದೇಶ ಹೊರಡಿಸಿದ್ದ ನ್ಯಾಯ ಮೂರ್ತಿ ವಿವೇಕ್ ಅಗರ್ವಾಲ್ ತಿಂಗಳ ಒಳಗೆ ಈ ಬಗ್ಗೆ ಮೇಲ್ಮನವಿ ಸಲ್ಲಿಸಲು ಗಡುವು ನೀಡಿದ್ದರು. ಆದರೆ ಭೂಪಾಲದ ಜಿಲ್ಲಾಧಿಕಾರಿ ಕೌಶೇಂದ್ರ ವಿಕ್ರಂ ಸಿಂಗ್ ಅವರು ತಮಗೆ ಇನ್ನು ಹೈಕೋರ್ಟ್ ಆದೇಶ ದೊರೆತಿಲ್ಲ, ವಿವರಗಳು ದೊರೆತ ನಂತರ ಪ್ರತಿಕ್ರಿಯೆ ನೀಡುವುದಾಗಿ ಹೇಳಿದ್ದಾರೆ.

ಕುಟುಂಬ ನಿಗದಿತ 30 ದಿನಗಳಲ್ಲಿ ಮೇಲ್ಮನವಿ ಸಲ್ಲಿಸಿಲ್ಲ. ಹಲವಾರು ಕಾರಣಗಳನ್ನು ನೀಡಿ ಗಡುವು ವಿಸ್ತರಣೆಗೆ ಕೋರಲು ಅವಕಾಶ ಇದೆ ಎಂದು ವಕೀಲ ಚವನಿ ಹೇಳಿದ್ದಾರೆ.

# ನಾಯಕನಾಗಿ ಶ್ರೀರಾಮುಲು

**(3ನೇ ಪುಟದಿಂದ)** ವಾಲ್ಮೀಕಿ ಸಮುದಾಯದ ನಾಯಕರು, ಅವರ ಪ್ರಭಾವ ತಪ್ಪಿಸಲು ರಾಮುಲು ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಆ ಸಮುದಾಯದ ಬಲಿಷ್ಠ ನಾಯಕನನ್ನಾಗಿ ಮಾಡಲು ಶಿವಕುಮಾರ್ ಹೊರಟಿದ್ದಾರೆ.

ರಾಮುಲು ಪಕ್ಷ ಬಿಡುತ್ತಿರುವುದು ಇದೇ ಮೊದಲಲ್ಲ, ಈ ಹಿಂದೆ ಸಿಬಿಐ ನನ್ನನ್ನು ಜೈಲಿಗೆ ಕಳುಹಿಸಿದ ಸಂದರ್ಭದಲ್ಲಿ ನಾನು ಬೇಡವೆಂದರೂ, ಬಿಜೆಪಿ ತೊರೆದು ಬಿಆರ್‌ಎಸ್ ಪಕ್ಷ ಕಟ್ಟಿದರು.

ಅಂದು ರಾಜಕೀಯ ಸಂಕಷ್ಟದಲ್ಲಿದ್ದೆ, ನನ್ನ ಮಾತನ್ನು ಕೇಳಲಿಲ್ಲ, ಇದೀಗ ಮತ್ತೊಮ್ಮೆ ಪಕ್ಷ ತೊರೆದು ಶಿವಕುಮಾರ್ ಜೊತೆ ಕೈಜೋಡಿಸಲು ಹೊರಟಿದ್ದಾರೆ.

ರಾಮುಲು ಅವರನ್ನು ಕರೆತಂದು ಜೊತೆಗೆ ಇಟ್ಟುಕೊಂಡು ಶಾಸಕನನ್ನಾಗಿ ಮಾಡಿದೆ, ನಂತರ ಯಡಿಯೂರಪ್ಪ ಸರ್ಕಾರದಲ್ಲಿ ಸಚಿವರನ್ನಾಗಿ ಮಾಡಿದೆ.

ವಾಲ್ಮೀಕಿ ಸಮುದಾಯದ ನಾಯಕರಾಗಿ ಬೆಳೆಯಲು ಎಲ್ಲಾ ತರಹದ ಪ್ರೋತ್ಸಾಹ ನೀಡಿದೆ, ಆದರೆ, ಇದೀಗ ತಾಯಿ ಎದೆಗೆ ಒದ್ದು ಹೋಗುವಂತೆ ರಾಮುಲು ನನ್ನ ವಿರುದ್ಧ ತಿರುಗಿಬಿದ್ದಿದ್ದಾರೆ.

ರಾಮುಲು ಕಾಂಗ್ರೆಸ್ ಸೇರುವ ಬಗ್ಗೆ ಬಳ್ಳಾರಿಯಲ್ಲಿ ವ್ಯಾಪಕ ಚರ್ಚೆ ನಡೆದಿದೆ, ಇಂತಹ ಸಂದರ್ಭದಲ್ಲೇ ಅವರು ನನ್ನ ವಿರುದ್ಧ ಹೇಳಿಕೆ ನೀಡಿ ಪಕ್ಷ ತೊರೆಯುವ ಮಾತನಾಡಿದ್ದಾರೆ ಎಂದರು.

# ಸಿಎಂ ಒತ್ತಡಕ್ಕೆ ಮಣಿದಿರುವ ಲೋಕಾಯುಕ್ತ

**(3ನೇ ಪುಟದಿಂದ)** ಲೋಕಾಯುಕ್ತದ ಕ್ಲೀನ್ ಚಿಟ್ ವರದಿ ಸರಿಯಲ್ಲ, ಇದಕ್ಕೆ ಯಾವುದೇ ಪಾವಿತ್ರತೆ ಇಲ್ಲ, ಒತ್ತಡಕ್ಕೆ ಮಣಿದು ಕ್ಲೀನ್ ಚಿಟ್ ಕೊಡಲಾಗಿದೆ ಎಂಬುದು ನಮ್ಮೆಲ್ಲರ ಸ್ಪಷ್ಟ ಅಭಿಪ್ರಾಯ. ಇ.ಡಿ. ಆಧಾರರಹಿತ ಹೇಳಿಕೆಗಳನ್ನು ಮಾಧ್ಯಮಗಳಿಗೆ ನೀಡಲು ಸಾಧ್ಯವಿಲ್ಲ, ಮುಡಾ ಹಗರಣ ನಡೆದಿರುವುದಕ್ಕೆ ಆಧಾರಗಳಿರುತ್ತವೆ, ಇ.ಡಿ. ವರದಿ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಆತುರಾತುರವಾಗಿ ಕ್ಲೀನ್ ಚಿಟ್ ಪಡೆಯುವ ಪ್ರಯತ್ನ ಮಾಡಿದ್ದಾರೆ ಎಂಬುದರಲ್ಲಿ ಯಾವುದೇ ಅನುಮಾನ ಬೇಡ ಇಲ್ಲ ಎಂದಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿ ಯೂರಪ್ಪ ಅವರ ಬಗ್ಗೆ ಕೆಲವರು ಅಪಮಾನಿಸುವ ರೀತಿಯಲ್ಲಿ ಒಂದು ವರ್ಷದಿಂದ ಹೇಳಿಕೆ ಕೊಡುತ್ತಿದ್ದಾರೆ. ಕಾರ್ಯಕರ್ತರು ಇದರಿಂದ ನೊಂದಿದ್ದಾರೆ. ಎಲ್ಲ ವಿಷಯ ಸರಿಪಡಿಸುವ ಕುರಿತು ರಾಷ್ಟ್ರೀಯ ನಾಯಕರ ಗಮನಕ್ಕೆ ತರ ಲಾಗುವುದು ಎಂದರು. ಕೋರ್ ಕಮಿಟಿ ಸಭೆ ಯಲ್ಲಿ ನಡೆದ ವಿಚಾರ ಕುರಿತು ಶ್ರೀರಾಮುಲು ಹೇಳಿಕೆ ಮಾಧ್ಯಮಗಳಲ್ಲಿ ಗಮನಿಸಿದ್ದೇನೆ, ಅವರು ಹಿರಿಯರು, ಅವರ ಬಗ್ಗೆ ಗೌರವವಿದೆ. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಉಪಸ್ಥಿತಿಯಲ್ಲಿ ಎಲ್ಲರೂ ಒಗ್ಗಟ್ಟಾಗಿ ಬಿಜೆಪಿಯನ್ನು ಬಹುಮತದೊಂದಿಗೆ ಅಧಿಕಾರಕ್ಕೆ ತರುವ ಚರ್ಚೆ ನಡೆದಿವೆ, ಅದರ ಕುರಿತು ನಾವು ಬಹಿರಂಗವಾಗಿ ಮಾತನಾಡುವುದಿಲ್ಲ ಎಂದರು.

# ಇಂದಿಗೂ ನನಸಾಗದ ನೇತಾಜಿ ಕನಸು

**(3ನೇ ಪುಟದಿಂದ)** ಹೇಗಿರಬೇ ಕೆಂದು ನಿರ್ದೇಶಿಸುತ್ತಾರೆ. ಅದರ ಫಲವಾಗಿ, ಶಿಕ್ಷಣ, ಆರೋಗ್ಯ, ರಸ್ತೆ, ಭೂಮಿ, ಕಾರ್ಖಾನೆ, ನೀರು, ಎಲ್ಲವೂ ಖಾಸಗೀಕರಣಕ್ಕೆ ಒಳಪಟ್ಟು ಮಾರಾಟದ ಸರಕುಗಳಾಗಿವೆ. ಇಂದು ದೇಶದಲ್ಲಿ ನಿರುದ್ಯೋಗಿಗಳ ದೊಡ್ಡ ಪಡೆಯೇ ನಿರ್ಮಾಣವಾಗಿದೆ. ಹಾಗಾಗಿ ಶೋಷಣೆಯ ವಿರುದ್ಧ ನೇತಾಜಿ ಕಟ್ಟಿದ ಹೋರಾಟದ ಮಾರ್ಗದಲ್ಲಿ ಯುವಕರನ್ನು ಮುನ್ನಡೆಸಲು ಎಐಡಿವೈಓ ಅವಿರತ ಪ್ರಯತ್ನ ನಡೆಸುತ್ತಿದೆ ಎಂದರು. ಎಐಡಿವೈಓನ ಜಿಲ್ಲಾ ಸಮಿತಿ ಸದಸ್ಯರಾದ ಅನಿಲ್ ಕುಮಾರ್, ಗುರು, ಶಶಿ ಹಾಗೂ ವಿ.ಎಸ್ ಪ್ಯಾರಾ ಮೆಡಿಕಲ್ ಕಾಲೇಜು ಮತ್ತು ಮೃತ್ಯುಂಜಯ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

# ಕೋಚಿಂಗ್ ಸೆಂಟರ್‌ಗಳ ಹಾವಳಿ

**(3ನೇ ಪುಟದಿಂದ)** ಎಂದರು.

ದೇಶದ ಅಭಿವೃದ್ಧಿಗೆ ಶಿಕ್ಷಣ ಅಗತ್ಯ ಆದರೆ, ಸಾಮಾಜಿಕ ಪಿಡುಗುಗಳು ಹೆಚ್ಚಾಗುತ್ತಲೇ ಇವೆ. ಶಾಲೆಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಿದರೂ ಪ್ರಯೋಜನವಾಗುತ್ತಿಲ್ಲ. ಮಕ್ಕಳಿಗೆ ಆಗುತ್ತಿರುವ ಅನಾಹುತಗಳನ್ನು ತಪ್ಪಿಸಲು ಸಾಧ್ಯಗುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

2030ರ ವೇಳೆಗೆ ಭಾರತ ಬಾಲ್ಯ ವಿವಾಹ ಮುಕ್ತ ಆಗುವ ಗುರಿ ಹೊಂದಿದೆ. ಮಗು ಶಾಲೆಗೆ ಗೈರು ಆಗಿದ್ದರೆ ತಕ್ಷಣ ಮಾಹಿತಿ ನೀಡಬೇಕು. ಪರಿಶೀಲನೆ ಮಾಡಬೇಕು. ಖಾಸಗಿ ಶಾಲೆಯ ಮಕ್ಕಳು ಗೈರು ಆಗಿದ್ದರೆ ತಕ್ಷಣ ಪೋಷಕರಿಗೆ ಸಂದೇಶ ರವಾನೆ ಆಗುತ್ತದೆ. ತಂತ್ರಜ್ಞಾನದಿಂದ ಮಕ್ಕಳ ಮೇಲೆ ನಿಗಾ ಇಡುವ ವ್ಯವಸ್ಥೆ ಕಲ್ಪಿಸಲು ಸಾಧ್ಯ ಇದೆ. ಒಂದು ದಿನ ಮಗು ಶಾಲೆಯಿಂದ ಹೊರಗೆ ಉಳಿದರೆ ಪರಿಶೀಲನೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಡಿಡಿಪಿಐ ಜಿ.ಕೊಟ್ರೇಶ್ ಮಾತನಾಡಿ, ಮಕ್ಕಳಿಗೆ ರಕ್ಷಣೆ ನೀಡುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಕೆಲಸ ಮಾಡಿದೆ. ಶಾಲೆಯಿಂದ ಹೊರಗೆ ಉಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ಪ್ರಯತ್ನ ಮಾಡಲಾಗುತ್ತಿದೆ ಎಂದರು. ಉಚಿತ ಮತ್ತು ಕಡ್ಡಾಯ ಶಿಕ್ಷಣದ ಬಗ್ಗೆ ಶಿಕ್ಷಕ ನಾಗರಾಜ. ಡಿ ಉಪನ್ಯಾಸ ನೀಡಿದರು. ಆರ್.ಸಿ.ಹೆಚ್. ಅಧಿಕಾರಿ ಡಾ.ರೇಣುಕಾರಾಧ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಉಪನಿರ್ದೇಶಕ ರಾಜಾನಾಯ್ಕ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕವಿತಾ ಟಿ ಎನ್. ಅಥಣಿ ಕಾಲೇಜು ಪ್ರಾಂಶುಪಾಲ ಷಣ್ಮುಖಪ್ಪ ಉಪಸ್ಥಿತರಿದ್ದರು.

# ಅಮೆರಿಕದಲ್ಲಿ ಸಿಸೇರಿಯನ್ ಧಾವಂತ

**(3ನೇ ಪುಟದಿಂದ)** ಸಮಸ್ಯೆ, ಕಡಿಮೆ ತೂಕ, ನರ ಸಮಸ್ಯೆ ಇತ್ಯಾದಿಗಳು ಕಾಣಿಸಿಕೊಳ್ಳುತ್ತವೆ ಎಂದು ಟೆಕ್ಸಾಸ್‌ನಲ್ಲಿರುವ ವೈದ್ಯ ಎಸ್.ಜಿ. ಮುಕ್ಕುಲ ಹೇಳಿದ್ದಾರೆ.

ಕಳೆದ ಎರಡು ದಿನಗಳಿಂದ ಈ ಬಗ್ಗೆ 15 ರಿಂದ 20 ದಂಪತಿಗಳ ಜೊತೆ ಮಾತನಾಡಿದ್ದೇನೆ ಎಂದವರು ಹೇಳಿದ್ದಾರೆ.

ಅಮೆರಿಕದಲ್ಲಿ ಗ್ರೀನ್ ಕಾರ್ಡ್ ಮೂಲಕ ಪೌರತ್ವ ಪಡೆಯಲು ದೊಡ್ಡ ಸರದಿ ಇದೆ. ಕೆಲವರಂತೂ ಶತಮಾನದವರೆಗೆ ಕಾಯಬೇಕಿದೆ. ಆದರೆ ಇಂಥವರಿಗೆ ಜನಿಸಿದ ಮಕ್ಕಳು ಅಮೆರಿಕದ ಪೌರತ್ವ ಪಡೆಯಲು ಅವಕಾಶ ಇದೆ. ಈ ನಿಯಮ ಅಮೆರಿಕದಲ್ಲಿ ಇರುವವರಿಗೆ ಆಶಾ ಕಿರಣವಾಗಿತ್ತು. ನಾವು 8 ವರ್ಷಗಳಿಂದ ಅಮೆರಿಕದಲ್ಲಿ ಹೆಚ್-1ಬಿ ವೀಸಾದಲ್ಲಿ ಇದ್ದೇವೆ. ನಾವು ಆರು ವರ್ಷಗಳಿಂದ ಗ್ರೀನ್ ಕಾರ್ಡಿಗೆ ಕಾಯುತ್ತಿದ್ದೇವೆ. ನಾವು ಸ್ಥಿರ ಕುಟುಂಬ ಹೊಂದಲು ಜನ್ಮಸಿದ್ಧ ಪೌರತ್ವ ಒಂದೇ ದಾರಿಯಾಗಿದೆ. ಅನಿಶ್ಚಿತತೆ ನಮ್ಮನ್ನು ಗಾಬರಿಗೆ ದೂಡುತ್ತಿದೆ ಎಂದು ಮಾರ್ಚ್ ತಿಂಗಳಲ್ಲಿ ಹೆರಿಗೆ ಅವಧಿ ಹೊಂದಿರುವ ಭಾರತೀಯ ಮೂಲದ ಮಹಿಳೆ ಒಬ್ಬರು ಹೇಳಿದ್ದಾರೆ. ಅಮೆರಿಕಗೆ ಅಕ್ರಮವಾಗಿ ತೆರಳಿರುವವರ ಪರಿಸ್ಥಿತಿ ಇನ್ನೂ ಗಂಭೀರವಾಗಿದೆ. ಅಕ್ರಮವಾಗಿ ತೆರಳಿದವರು ತಮ್ಮ ಮಕ್ಕಳ ಮೂಲಕ ಪೌರತ್ವ ಪಡೆದುಕೊಳ್ಳಬಹುದು ಎಂದು ಕನಸು ಕಾಣುತ್ತಿದ್ದರು. ಅವರಿಗೆ ಈಗ ತೀವ್ರ ನಿರಾಸೆ ಎದುರಾಗಿದೆ.

## ಬೆಲೆ ವ್ಯತ್ಯಾಸ: ಆಪಲ್, ಓಲಾ, ಊಬರ್ ವಿರುದ್ಧ ನೋಟಿಸ್

**(3ನೇ ಪುಟದಿಂದ)** ಜೋಶಿ ತಿಳಿಸಿದ್ದಾರೆ. ಲೋಕಲ್ ಸರ್ಕಲ್ಸ್ ನಡೆಸಿದ ಸಮೀಕ್ಷೆಯ ಪ್ರಕಾರ ಅಪ್ಡೇಟ್ ಮಾಡಿಕೊಂಡ ನಂತರ ಶೇಕಡ 60ರಷ್ಟು ಬಳಕೆದಾರರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಐಫೋನ್‌ನ 18.2.1 ಅಪ್‌ಡೇಟ್ ನಂತರ ಸಮಸ್ಯೆಗಳು ಕಾಣಿಸಿಕೊಂಡಿವೆ ಎಂದು ದೂರಲಾಗಿದೆ. ಓಲಾ ಹಾಗೂ ಊಬರ್‌ಗಳು ಗ್ರಾಹಕರು ಬಳಸುವ ತಂತ್ರಾಂಶಗಳ ಆಧಾರದ ಮೇಲೆ ಬೇರೆ ಬೇರೆ ಬೆಲೆಗಳನ್ನು ನಿಗದಿಪಡಿಸುತ್ತಿವೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಅವುಗಳಿಗೆ ನೋಟಿಸ್ ಕಳಿಸಲಾಗಿದೆ.

# ಹರಿಹರಕ್ಕೆ ಇಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರು

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಅಪರ್ಣಾ ಎಂ. ಕೊಳ್ಳ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಇಂದು ಬೆಳಿಗ್ಗೆ 10.30 ಕ್ಕೆ ಬಾಲ್ಯವಿವಾಹ ಮತ್ತು ಪೋಕ್ಸೋ ಕಾಯ್ದೆ ತರಬೇತಿ ಹಾಗೂ ಮಕ್ಕಳ ಸಂವಾದದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 12.30 ಕ್ಕೆ ಆರ್‌ಟಿಇ ಕಾಯ್ದೆ-2009 ರ ಕುರಿತು ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸುವರು.

## ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಶ್ರೀ ಡಿ.ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ದಾವಣಗೆರೆ-06

ನಂ:ದಾಹನಪ್ರಾ:ತಾಶಾ:ಸಇಂ-2:ಕಸಾಸಂಪೋ:ಟೆಂಪ್ರ:09:2024-25/2882 ದಿನಾಂಕ:22-01-2025.

### ಅಲ್ಪಾವಧಿ ಟೆಂಡರ್ ಪ್ರಕಟಣೆ

**(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)**

ಆಯುಕ್ತರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ಶ್ರೀ ಡಿ.ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ದಾವಣಗೆರೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಿಂದ ನೋಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೋಂದಾಯಿಸಿಲ್ಪಟ್ಟ ಗುತ್ತಿಗೆದಾರರಿಂದ ಪ್ರಾಧಿಕಾರದ ನಿಯಮಾವಳಿ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

**ಇಂಡೆಂಟ್ ಸಂಖ್ಯೆ:- DHUDA/ 2024-25/ SE0006**

**ಕಾಮಗಾರಿಯ ಹೆಸರು:- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸಿರುವ ಶ್ರೀ ಎಸ್.ನಿಜಲಿಂಗಪ್ಪ ಬಡಾವಣೆಯ ಸಂಪೂರ್ಣ ಸರ್ವೆ ಕಾರ್ಯವನ್ನು ಮಾಡುವ ಬಗ್ಗೆ.**

**ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ:- 3.00**

**ಗುತ್ತಿಗೆ ದಾರರ ದರ್ಜೆ:- ನೋಂದಾಯಿತ ಏಜನ್ಸಿ /ಸಲಹಾ ಸಂಸ್ಥೆ**

**ಮುಂಗಡ ಹಣ ಠೇವಣಿ (ಇ.ಎಂ.ಡಿ.) ರೂ.ಗಳಲ್ಲಿ:- 7500/-**

ಟೆಂಡರ್ ದಿನಾಂಕಗಳು : 1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 29-01-2025 ಸಾಯಂಕಾಲ 17.00 ಘಂಟೆವರೆಗೆ 3) ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ 31-01-2025 ಬೆಳಿಗ್ಗೆ 11.00 ಘಂಟೆಗೆ

Note: The rates quoted, whether specified or not, in the tender as per sanctioned estimate are inclusive of all lead and lifts and all other incidental charges to complete the work successfully.

1) ಯಾವ ಕಾರಣವನ್ನು ಸಹ ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. 2) ಅಪೂರ್ಣ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು. 3) ಗುತ್ತಿಗೆದಾರರು ಕಾಮಗಾರಿಗೆ ಬೇಕಾಗುವ ಸಾಮಗ್ರಿಗಳ ಗುಣಮಟ್ಟದ ಪರೀಕ್ಷಾ ವರದಿಯನ್ನು ಪ್ರಾಧಿಕಾರವು ನೇಮಿಸುವ ಮೂರನೇ ವ್ಯಕ್ತಿ ತಪಾಸಣಾ ತಂಡದವರಿಂದ ಅನುಮೋದಿಸಿಕೊಂಡು ನಂತರ ಕಾಮಗಾರಿಗೆ ಉಪಯೋಗಿಸಲು ಬದ್ಧರಾಗಿರತಕ್ಕದ್ದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ವಾಸಾಇ/ದಾವಣಗೆರೆ/679/ಕೆಎಸ್‌ಎಂಸಿಎ/2024-25

ಸಹಿ/- ಆಯುಕ್ತರು, ದಾ-ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 50x80 South, 30x40 West, ಬನಶಂಕರಿ ಲೇಔಟ್‌ನಲ್ಲಿ 40x45 East, 30x60, 30x60 East ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ, ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ, 40 ಅಡಿ ರಸ್ತೆಗೆ ಹೊಂದಿಕೊಂಡು ಆಂಜನೇಯ ಬಡಾವಣೆಯಲ್ಲಿ 30x50 ಉತ್ತರ, ವಿನಾಯಕ ಬಡಾವಣೆಯಲ್ಲಿ 30x50 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಸೈಟ್ ಮಾರಾಟಕ್ಕಿದೆ**
ಕೊಂಡಜ್ಜಿ ರಸ್ತೆಯ LBK ಲೇಔಟ್‌ನಲ್ಲಿ ದೂಡಾ ಫೈನಲ್ ಅಪ್ರೂವಲ್ 30×40 ಅಳತೆಯ ಪಶ್ಚಿಮ ದಿಕ್ಕಿನ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
98441 87574

**ಸೈಟು ಮಾರಾಟಕ್ಕಿದೆ**
ಹಳೆ ಕುಂದವಾಡದಲ್ಲಿರುವ 29.98 ×28.93= 868 ಅಳತೆಯ (ದಕ್ಷಿಣ) ಸೈಟು ಹಾಗೂ ಹರಿಹರದ ಶೇರಾಪುರದಲ್ಲಿ (ನೌಕರ ಸಂಘದವರು ನಿರ್ಮಿಸುತ್ತಿರುವ ಲೇಔಟ್ ಹತ್ತಿರ) 40×60 (ಉತ್ತರ) KHB ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
9972 343286

**ಬೇಕಾಗಿದ್ದಾರೆ**
ದಾವಣಗೆರೆ ಹೊಸ ಬಸ್ ನಿಲ್ದಾಣ ಹಿಂಭಾಗದಲ್ಲಿರುವ ಪ್ರತಿಷ್ಠಿತ ಬಾರ್ & ರೆಸ್ಟೋರೆಂಟ್‌ನಲ್ಲಿ ವೆಂಡರ್ ಕೆಲಸಕ್ಕಾಗಿ ಉತ್ಸಾಹಿ ಯುವಕರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಊಟ, ವಸತಿ, ಉಚಿತವಾಗಿ ನೀಡಲಾಗುವುದು. ಆಸಕ್ತರು ಸಂಪರ್ಕಿಸಿ.
ಸಂತೋಷ, ಮಾಲೀಕರು.
98442 99666

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80, 40x60 North, 120 ಅಡಿ ರೋಡಿಗಿದೆ, 50x80 East, 40x60 East, 40x60 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
96860 22969

**ಡ್ರೈವರ್ ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20KL ಟ್ಯಾಂಕರ್ ಲಾರಿಗೆ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ. ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ :
90082 28222, 99001 42052

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟ್ಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
94484 39639

**ಬೇಕಾಗಿದ್ದಾರೆ**
ದಾವಣಗೆರೆಯ ಪಿ.ಜೆ. ಬಡಾವಣೆಯ ದೇವಸ್ಥಾನದ ಆವರಣಕ್ಕೆ ವಾಚ್ ಮ್ಯಾನ್ ಮತ್ತು ಕೇರ್ ಟೇಕರ್ ಬೇಕಾಗಿದ್ದಾರೆ. ವೇತನದೊಂದಿಗೆ ಉಚಿತ ವಸತಿ ಸೌಲಭ್ಯವನ್ನು ನೀಡಲಾಗುವುದು. ವಿವರಗಳಿಗೆ ಸಂಪರ್ಕಿಸಿ.
97432 49629

**ನಂದಿನಿ ಹೋಟೇಲ್**
ಅಡುಗೆ ಮಾಡಲು ಭಟ್ಟರು ಹಾಗೂ ಪಾತ್ರೆ ತೊಳೆಯಲು ಮಹಿಳೆಯರು ಬೇಕಾಗಿದ್ದಾರೆ ಮತ್ತು ನಮ್ಮಲ್ಲಿ ಪ್ರತಿ ದಿನ ಹೋಳಿಗೆ ಊಟ ಸಿಗುತ್ತದೆ. (ಬಿಳಿ ಮತ್ತು ಸಿಹಿ ಹೋಳಿಗೆ) ಸ್ಥಳ : ಜೀನಿಯಸ್ ಶಾಲೆ ಪಕ್ಕ, ಶಕ್ತಿ ನಗರ.
94835 32186

**ವಿ.ಆರ್. ಮನೆ ಹೋಳಿಗೆ ಕುರುಕ್ ತಿಂಡಿ**
Hot Live ಪ್ರತಿದಿನ ವಿವಿಧ ಹೋಳಿಗೆಗಳು ಸಿಗುತ್ತವೆ. ಮತ್ತು ಮದುವೆ ಶುಭ ಸಮಾರಂಭಗಳಿಗೆ ಕ್ಯಾಟರಿಂಗ್ ವ್ಯವಸ್ಥೆ ಇರುತ್ತದೆ.
* ಶೀಘ್ರದಲ್ಲಿ ರೊಟ್ಟಿ, ಪಲ್ಯ ಸಿಗುತ್ತವೆ.
ಸ್ಥಳ : 1ನೇ ಬಸ್ ಸ್ಟಾಪ್ ಹತ್ತಿರ, ನಂದಿನಿ ಪಾರ್ಲರ್ ಪಕ್ಕ, ವಿದ್ಯಾನಗರ, ದಾವಣಗೆರೆ.
70224 20839, 7483664046

**ಮೊರಾರ್ಜಿ ಶಾಲೆಗಳಿಗೆ ತರಬೇತಿ**
ಮೊರಾರ್ಜಿ ಶಾಲೆಗಳಿಗೆ ಇದೇ ಶುಕ್ರವಾರ (24.01.2025) ರಿಂದ ಪ್ರತಿ ದಿನ ಸಂಜೆ 6 ರಿಂದ 9 ರವರೆಗೆ ತರಬೇತಿ ಇರುತ್ತದೆ. ಇದಲ್ಲದೆ ನಮ್ಮಲ್ಲಿ ಇದ್ದು ಈ ಮೇಲಿನ ಶಾಲೆಗಳಿಗೆ ಓದಲು ಹಾಸ್ಟೆಲ್‌ನ ವ್ಯವಸ್ಥೆ ಸಹ ಇರುತ್ತದೆ. ತರಬೇತಿ ನೀಡುವವರು
ಶ್ರೀ ಸುರೇಶ್ ಪಿ. ಮುರುಗಿ. (M.sc, B.Ed)
99028 24909, 98447 48763

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
98443 10168

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ) ದಾವಣಗೆರೆ.
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
www.hindusmatrimony.com
15-01-2025 ರಿಂದ 31-01-2025
ಎಲ್ಲಾ ಹಿಂದೂ ವಧುಗಳಿಗೆ
* (Free Registration)
80509 52637, 9380213677

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**OFFICE SPACE FOR RENT**
- Suitable for Pharma Companie, Banks and Offices
- 80x60 sized Separate Chambers.
- Abandent Parking.
- Easy access to Highway
- Toilet, Bolcany and Pantry.
- Lift access
Book Now
Mob.:98806 86882
Lake view no. 4038/35, Basaveshwara layout, Opp. Bantara Bhavana, Kundavada Road, Davangere.

**ಸೈಟ್, ಮನೆ, ಜಮೀನು ಮಾರಾಟಕ್ಕೆ & ಕೊಳ್ಳುವುದಕ್ಕೆ**
ಆಸಕ್ತರು ಸಂಪರ್ಕಿಸಿ : ಏಜೆಂಟ್
94487 13486
99866 77346

**NEW APARTMENT**
2 BHK, House is Available for Rent, Ready for immediately occupency
Contact : 98806 86882

**ವೃದ್ಧಾಶ್ರಮ**
ಶ್ರೀ ಮಾತಾ ಟ್ರಸ್ಟ್, ಶಾಸ್ತ್ರಿಹಳ್ಳಿ ತುಂಬಿಗೆರೆ ಪೋಸ್ಟ್, ದಾವಣಗೆರೆ ತಾ||, ಈ ಸಂಸ್ಥೆ ನಡೆಸುತ್ತಿರುವ ವೃದ್ಧಾಶ್ರಮವನ್ನು ಸೇರಲು ಬಯಸುವ 50 ವರ್ಷ ಮೇಲ್ಪಟ್ಟವರು ಸಂಪರ್ಕಿಸಿ :
99001 42052, 97319 93770

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಪಂಪ್ ಅಟೆಂಡರ್ ಕೆಲಸಕ್ಕೆ ಮಹಿಳೆಯರು/ಪುರುಷರು ಬೇಕಾಗಿದ್ದಾರೆ.
ಸಂಪರ್ಕಿಸಿ :
79005 30053

**CCTV ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
Age : 20-25 Years
Address :
VAHIN GROUPS
3096, Bapuji high school road, MCC `B' Block, Davanagere.
93805 83672

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಕೆಲಸ ಖಾಲಿ ಇದೆ**
ಮೆಡಿಕಲ್ ಶಾಪ್ ನಲ್ಲಿ ಕೆಲಸ ಖಾಲಿ ಇದೆ
ಕರೆ ಮಾಡಿ:
7406659695
7975177934

**ಹೆಸರು ತಿದ್ದುಪಡಿ**
ದಾವಣಗೆರೆ ತಾ. ಬೇತೂರು ಗ್ರಾಮದ ಬಿ.ಸಿ. ಮೃತ್ಯುಂಜಯ್ಯ ಆದ ನಾನು ಈ ಮೂಲಕ ಹೇಳುವುದೇನೆಂದರೆ ದಿನಾಂಕ 05.03.2018ರಂದು ದಾವಣಗೆರೆಯ ಬಾಪೂಜಿ ಆಸ್ಪತ್ರೆಯಲ್ಲಿ ಜನನವಾದ ನನ್ನ ಮಗನ ಜನನ ಪತ್ರದಲ್ಲಿ RAVI TEJU M.K ಎಂದು ಇದ್ದು, ಇದನ್ನು ದಿನಾಂಕ 03.01.2025ರಂದು ಹರಿಹರ ನೋಟರಿಯವರ ಸಮ್ಮುಖದಲ್ಲಿ ರವಿತೇಜು ಕೆ.ಎಂ. (RAVITEJU KM) ಎಂದು ತಿದ್ದುಪಡಿ ಮಾಡಿಸಿ ದಾವಣಗೆರೆ ಮಹಾನಗರ ಪಾಲಿಕೆ ಇವರಿಂದ ಹೊಸ ಜನನ ಪ್ರಮಾಣ ಪತ್ರ ಪಡೆದಿರುತ್ತೇವೆ. - ಬಿ.ಸಿ. ಮೃತ್ಯುಂಜಯ

**ಬೇಕಾಗಿದ್ದಾರೆ**
ನಮ್ಮ ಕೌಂಟರ್‌ಗಳಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

# ಸಾಮಾಜಿಕ ಜಾಲತಾಣದ ಮೇಲೆ ನಿಯಂತ್ರಣಕ್ಕೆ ಪಾಕ್ ಅಂಗೀಕಾರ

**ರಾಷ್ಟ್ರೀಯ ಸದನದಲ್ಲಿ ಮಸೂದೆ ಅಂಗೀಕಾರ**

ಇಸ್ಲಾಮಾಬಾದ್, ಜ.23- ಸಾಮಾಜಿಕ ಜಾಲತಾಣದ ಮೇಲೆ ವ್ಯಾಪಕ ನಿಯಂತ್ರಣ ಹೇರಲು ಪಾಕಿಸ್ತಾನ ಸರ್ಕಾರ ಮುಂದಾಗಿದೆ. ಸಾಮಾಜಿಕ ಜಾಲತಾಣ ವೇದಿಕೆಗಳನ್ನು ತಡೆಯುವುದರಿಂದ ಹಿಡಿದು ಬಳಕೆದಾರರನ್ನು ಜೈಲಿಗೆ ಕಳಿಸುವವರೆಗೆ ಹಲವು ಪ್ರಸ್ತಾಪಗಳನ್ನು ರೂಪಿಸಲಾಗಿದೆ. ಸರ್ಕಾರ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಮತ್ತಷ್ಟು ಕಡಿವಾಣ ಹೇರಲು ಮುಂದಾಗಿದೆ ಎಂದು ಪ್ರತಿಪಕ್ಷಗಳು ಟೀಕಿಸಿವೆ.

ಕಾನೂನು ಸಚಿವ ಅಜಂ ನಾಜಿರ್ ತರಾರ್ ಅವರು ಎಲೆಕ್ಟ್ರಾನಿಕ್ ಅಪರಾಧಗಳ ತಡೆ ಮಸೂದೆಯನ್ನು ರಾಷ್ಟ್ರೀಯ ಸದನದಲ್ಲಿ ಮಂಡಿಸಿ ಅಂಗೀಕಾರ ಪಡೆದುಕೊಂಡಿದ್ದಾರೆ. ಮಸೂದೆ ವಿರೋಧಿಸಿ ಪ್ರತಿಪಕ್ಷವಾದ ಪಿ.ಟಿ.ಐ. ಸದಸ್ಯರು ಸಭಾತ್ಯಾಗ ಮಾಡಿದರು. ಗ್ಯಾಲರಿಯಲ್ಲಿದ್ದ ಪತ್ರಕರ್ತರೂ ಸಹ ಮಸೂದೆ ವಿರೋಧಿಸಿ ಅಲ್ಲಿಂದ ನಿರ್ಗಮಿಸಿದರು.

ಈ ಕಾಯ್ದೆಯ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಕಾನೂನುಬಾಹಿರ ಹಾಗೂ ಆಕ್ಷೇಪಾರ್ಹ ಮಾಹಿತಿಯನ್ನು ತಡೆಯಲಾಗುವುದು ಎಂದು ಸರ್ಕಾರ ತಿಳಿಸಿದೆ.

ಈ ನಿಯಮಗಳು ವ್ಯಕ್ತಿಗಳು ಹಾಗೂ ಸಾಮಾಜಿಕ ಜಾಲತಾಣ ಸಂಘಟನೆ ಎರಡಕ್ಕೂ ಅನ್ವಯವಾಗಲಿವೆ. ಸಾಮಾಜಿಕ ಜಾಲತಾಣಗಳು ನಿಯಂತ್ರಕ ಒಂದರ ಬಳಿ ನೋಂದಣಿ ಮಾಡಿಸಿಕೊಳ್ಳಬೇಕಿದೆ. ಸರ್ಕಾರದ ನೂತನ ನಿಯಮಗಳನ್ನು ಪಾಲಿಸದೆ ಇದ್ದರೆ ತಾತ್ಕಾಲಿಕ ಇಲ್ಲವೇ ಶಾಶ್ವತ ನಿಷೇಧ ಹೇರಲಾಗುವುದು. ತಪ್ಪು ಮಾಹಿತಿ ಹರಡುವುದನ್ನು ಅಪರಾಧಗೊಳಿಸಲಾಗಿದ್ದು ಇದಕ್ಕಾಗಿ ಮೂರು ವರ್ಷ ಜೈಲು ಹಾಗೂ 20 ಲಕ್ಷ ರೂಪಾಯಿ ದಂಡ ವಿಧಿಸಲಾಗುವುದು. ಕಳೆದ ವರ್ಷ ಸರ್ಕಾರ ಟ್ವಿಟ್ಟರ್ ಮೇಲೆ ನಿಷೇಧ ಹೇರಿತ್ತು. ಈಗಲೂ ಸಹ ಟ್ವಿಟರ್ ಮೇಲಿನ ನಿಷೇಧ ಮುಂದುವರೆದಿದೆ.

ಸಾಮಾಜಿಕ ಜಾಲತಾಣ ವೇದಿಕೆಗಳಲ್ಲಿ ಪ್ರತಿಪಕ್ಷದ ನಾಯಕ ಇಮ್ರಾನ್ ಖಾನ್ ಅವರು ಜನಪ್ರಿಯರಾಗಿದ್ದಾರೆ. ಅವರ ಬೆಂಬಲಿಗರು ಜಾಲತಾಣಗಳ ಮೂಲಕ ವ್ಯಾಪಕ ಅಭಿಯಾನ ನಡೆಸುತ್ತಿದ್ದಾರೆ. 2023 ರಿಂದ ಖಾನ್ ಜೈಲಿನಲ್ಲಿದ್ದಾರೆ ಖಾನ್ ಅವರ ಪಿಟಿಐ ಪಕ್ಷ ಸಹ ಸಾಮಾಜಿಕ ಜಾಲತಾಣಗಳ ಮೂಲಕ ಪ್ರತಿಭಟನೆಗಳನ್ನು ಆಯೋಜಿಸುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಸಾಮಾಜಿಕ ಜಾಲತಾಣಗಳ ಮೇಲಿನ ನಿರ್ಬಂಧ ಹೆಚ್ಚಿಸಲಾಗುತ್ತಿದೆ. ಪತ್ರಕರ್ತರ ಮೇಲೂ ಸಹ ಸರ್ಕಾರದ ಒತ್ತಡ ಹೆಚ್ಚಾಗಿದೆ. ಬಹುತೇಕ ಸುದ್ದಿ ವಾಹಿನಿಗಳು ಇಮ್ರಾನ್ ಖಾನ್ ಹೆಸರು ಹೇಳುತ್ತಿಲ್ಲ. ಪಿಟಿಐ ಸ್ಥಾಪಕ ಎಂದಷ್ಟೇ ಹೇಳುತ್ತಿವೆ.

ಮಾನವ ಹಕ್ಕುಗಳ ಕಾರ್ಯಕರ್ತರು ಹಾಗೂ ಪತ್ರಕರ್ತರ ಸಂಘಟನೆಗಳು ನೂತನ ಕಾಯ್ದೆಯನ್ನು ವಿರೋಧಿಸಿವೆ. ಆದರೆ ಸರ್ಕಾರ ಬಹುಮತ ಹೊಂದಿರುವ ಕಾರಣ ಈ ಕಾಯ್ದೆ ಜಾರಿ ಸುಗಮವಾಗಿದೆ.

# ಪ್ರಕರಣ ಮುಚ್ಚಿಹಾಕಲು ಲೋಕಾ ಪ್ರಯತ್ನ: ಅಶೋಕ್

**(3ನೇ ಪುಟದಿಂದ)** ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎನ್ನಲಾಗುತ್ತಿದೆ, ಆದರೆ, ಇದರ ಹಿಂದೆ ಸಿದ್ದರಾಮಯ್ಯ ಇರುವುದನ್ನು ಮುಚ್ಚಿಹಾಕಲಾಗುತ್ತಿದೆ, ಇದರ ವಿರುದ್ಧ ಬಿಜೆಪಿ ಹೋರಾಟ ಮುಂದುವರೆಸಲಿದೆ ಎಂದರು.

ಲೋಕಾಯುಕ್ತ ಪೊಲೀಸ್ ರಾಜ್ಯ ಸರ್ಕಾರದ ಅಡಿಯಲ್ಲಿ ಕೆಲಸ ಮಾಡುತ್ತದೆ, ಪೊಲೀಸರಿಗೂ ವರ್ಗಾವಣೆ, ಬಡ್ತಿ ಬೇಕಿರುತ್ತದೆ. ಆದ್ದರಿಂದ, ತನಿಖೆ ಈ ರೀತಿ ನಡೆಯುತ್ತಿದೆ, ಪೊಲೀಸರು ವರದಿ ನೀಡಿದರೂ ಅದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕ್ಲೀನ್ ಚಿಟ್ ನೀಡುವುದು ಖಚಿತ.

ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿದರೆ ಮಾತ್ರ ನಿಜಾಂಶ ಹೊರಬರಲಿದೆ, ಮಾಜಿ ಸಚಿವ ಬಿ.ನಾಗೇಂದ್ರಗೆ ಎಸ್ಐಟಿ ಕ್ಲೀನ್ ಚಿಟ್ ನೀಡಿರುವಾಗ, ಮುಖ್ಯಮಂತ್ರಿಗೆ ಕ್ಲೀನ್ ಚಿಟ್ ನೀಡುವುದು ಖಚಿತ, ಆದ್ದರಿಂದ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸುವವರೆಗೂ ಹೋರಾಟ ಮಾಡುತ್ತೇವೆ ಎಂದರು.

# ನಾಳೆ ಬಾಹ್ಯಾಕಾಶದಲ್ಲೊಂದು ಅತ್ಯಪರೂಪದ ವಿಸ್ಮಯ




ದಾವಣಗೆರೆ, ಜ. 23- ಈ ವಾರಾಂತ್ಯದಲ್ಲಿ ಅತ್ಯಪರೂಪದ 'ಖಗೋಳ ಕೌತುಕ'ವೊಂದು ನಡೆಯಲಿದ್ದು, ಆಕಾಶದಲ್ಲಿ ನಡೆಯುವ ಈ ವಿಸ್ಮಯವನ್ನು ನೋಡಲು ವಿಜ್ಞಾನಿಗಳ ಸಹಿತ ಜಗತ್ತಿನಾದ್ಯಂತ ಜನರು ಕುತೂಹಲದಿಂದ ಕಾಯುತ್ತಿದ್ದಾರೆ.

ಹೌದು, ಜನವರಿ 25ರಂದು ಬಹಳ ಅಪರೂಪವಾದ ಖಗೋಳ ಘಟನೆಯೊಂದು ನಡೆಯಲಿದೆ. ಅಪರೂಪದ ಗ್ರಹಗಳ ಸಂಯೋಗ ನಡೆಯಲಿದೆ. ಅಂದರೆ ಆ ದಿನ ಸೌರಮಂಡಲದ ಗ್ರಹಗಳಾದ ಬುಧ, ಶುಕ್ರ, ಮಂಗಳ, ಗುರು ಮತ್ತು ಶನಿ ಗ್ರಹಗಳು ಅಪರೂಪವಾದ ಸ್ಥಿತಿಯಲ್ಲಿ ತಮ್ಮ ಸಂಚಾರ ಮಾಡಲಿವೆ.

ಸೂರ್ಯಾಸ್ತದ ನಂತರ ಶುಕ್ರ ಮತ್ತು ಗುರು ಗ್ರಹಗಳು ಸಾಕಷ್ಟು ಪ್ರಕಾಶಮಾನವಾಗಿ ಹೊಳೆಯಲಿವೆ. ಇದರಲ್ಲಿ ಮಂಗಳ ಗ್ರಹ ಇನ್ನಷ್ಟು ಹೊಳಪನ್ನು ಸುರಿಸಲಿದೆ. ಬೇರೆ ಖಗೋಳ ಘಟನೆಗಳಿಗಿಂತ ವಿಭಿನ್ನವಾಗಿ ಈ ಗ್ರಹಗಳ ಸಂಯೋಗ ನಡೆಯಲಿದ್ದು, ಇದನ್ನು ಬರಿ ಕಣ್ಣಿನಲ್ಲೇ ನೋಡಬಹುದಾಗಿದೆ ಎಂದು ತಜ್ಞರು ಹೇಳಿದ್ದಾರೆ.

ಸೌರಮಂಡಲದ ಹಲವು ಗ್ರಹಗಳು ಸಾಲಾಗಿ ನಿಂತಂತೆ ಭಾಸವಾಗುವ ಈ ರಚನೆ, ಬಾಹ್ಯಾಕಾಶ ಪ್ರಿಯರಿಗೆ ಹಬ್ಬವಾಗಲಿದೆ. ಈ ಅಪರೂಪದ ಘಟನೆಯಲ್ಲಿ ಬುಧ, ಶುಕ್ರ, ಮಂಗಳ, ಗುರು ಮತ್ತು ಶನಿ ಗ್ರಹಗಳು ಆಕಾಶದ ಒಂದೇ ಭಾಗದಲ್ಲಿ ಒಟ್ಟಿಗೆ ಕಾಣಿಸಿಕೊಳ್ಳುತ್ತವೆ. ಆದರೆ, ಒಂದೇ ನೇರ ಸಾಲಿನಲ್ಲಿ ಇರುವುದಿಲ್ಲ. ಈ ರಚನೆಯು ಆಕಾಶದಲ್ಲಿ ಗ್ರಹಗಳು ನರ್ತಿಸುವಂತೆ ಒಂದು ಸುಂದರ ಭ್ರಮೆಯನ್ನು ಉಂಟುಮಾಡುತ್ತದೆ.

ವಿಜ್ಞಾನದ ಪ್ರಕಾರ, ಗ್ರಹಗಳ ವಿಭಿನ್ನ ಪರಿಭ್ರಮಣ ಅವಧಿಗಳಿಂದಾಗಿ ಇಂತಹ ಸಾಲುಗಳು ಉಂಟಾಗುತ್ತವೆ. ಭೂಮಿಯಿಂದ ಈ ಘಟನೆಗಳನ್ನು ವಿರಳವಾಗಿ ಮಾತ್ರ ನೋಡಬಹುದು. 2025ರ ಜನವರಿಯಲ್ಲಿ ನಡೆಯುವ ಗ್ರಹಗಳ ಸಾಲು ವಿಶೇಷವಾದದ್ದು. ಇದನ್ನು ಬರಿಗಣ್ಣಿನಿಂದಲೇ ನೋಡಬಹುದು. ಮಾತ್ರವಲ್ಲದೆ ದೂರದರ್ಶಕದಿಂದ ನೋಡಿದರೆ ಇನ್ನಷ್ಟು ಸ್ಪಷ್ಟವಾಗಿ ಕಾಣುತ್ತದೆ.

**ಬಾಹ್ಯಾಕಾಶ ನೋಟಕ್ಕೊಂದಿಷ್ಟು ಸಲಹೆ :**

ನಮ್ಮ ಜೀವಿತ ಕಾಲಾವಧಿಯಲ್ಲಿ ಸಿಗುವ ಅಪರೂಪದ ಬಾಹ್ಯಾಕಾಶ ನೋಟವಾಗಿದೆ. ಇದನ್ನು ಜ.21 ರಿಂದ ಮುಂದಿನ ನಾಲ್ಕು ವಾರಗಳವರೆಗೆ ಸಂಜೆ 7.30 ರ ನಂತರ ವೀಕ್ಷಿಸಬಹುದು.ಬರಿಗಣ್ಣಿಗೆ 5 ಗ್ರಹಗಳನ್ನು ನೋಡಬಹುದು ಎಂದು ಖಗೋಳ ತಜ್ಞ ಎಂ.ಟಿ.ಶರಣಪ್ಪ ಮತ್ತು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ದಾವಣಗೆರೆ ಜಿಲ್ಲಾ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ ತಿಳಿಸಿದ್ದಾರೆ.

ಸೂರ್ಯಾಸ್ತವಾದೊಡನೆ ರಾತ್ರಿ ಆಕಾಶದಲ್ಲಿ 4 ಗ್ರಹಗಳಲ್ಲಿ ಶುಕ್ರ ಮತ್ತು ಶನಿ ಗ್ರಹಗಳು ನೈರುತ್ಯ ದಿಕ್ಕಿನಲ್ಲಿ, ಗುರು ಗ್ರಹವು ನೆತ್ತಿಯ ಆಗ್ನೇಯ ದಿಕ್ಕಿನಲ್ಲಿ ಹಾಗೂ ಪೂರ್ವ ದಿಕ್ಕಿನಲ್ಲಿ ಮಂಗಳ ಗ್ರಹವನ್ನು ನೋಡಬಹುದು. ಸೂರ್ಯಾಸ್ತವಾದ ನಂತರ 45 ನಿಮಿಷದ ವರೆಗೆ ಶುಕ್ರ ಮತ್ತು ಶನಿ ಗ್ರಹಗಳನ್ನು ನೋಡಲು ಉತ್ತಮವಾದ ವೇಳೆ ಆಗಿರುತ್ತದೆ. 9.30 ರನಂತರ ಆ ಗ್ರಹಗಳು ಅಸ್ತಂಗತ ವಾಗುತ್ತವೆ.

ಈಗಾಗಲೇ ಅಂದರೆ ಜನವರಿ 18 ಕ್ಕೆ ಶುಕ್ರ ಮತ್ತು ಶನಿ ಗ್ರಹಗಳು ಬಹಳ ಸಮೀಪದಲ್ಲಿ ಸಂಯೋಜನೆಗೊಂಡಿರುತ್ತವೆ. ಅವುಗಳ ನಡುವಿನ ಕೋನ 20 ಆಗಿರುತ್ತದೆ. ಶನಿ ಗ್ರಹಕ್ಕಿಂತ ಶುಕ್ರಗ್ರಹವು ಸುಮಾರು 110 ಪಟ್ಟು ಪ್ರಜ್ವಲಿಸುತ್ತದೆ. ಇದು ರಾತ್ರಿ ಆಕಾಶದಲ್ಲಿ ಚಂದ್ರನನ್ನು ಹೊರತುಪಡಿಸಿದರೆ ಪ್ರಕಾಶಮಾನವಾಗಿ ಕಾಣುವ ಆಕಾಶ ಕಾಯ.

ಇನ್ನೆರಡು ಗ್ರಹಗಳಾದ ನೆಪ್ಚೂನ್ ಮತ್ತು ಯುರೇನಸ್ ಗಳನ್ನು ದೂರದರ್ಶಕ ಸಹಾಯ ವಿಲ್ಲದೆ ವೀಕ್ಷಣೆ ಮಾಡಲು ಸಾಧ್ಯವಿಲ್ಲ. ನೆಪ್ಚೂನ್ ಗ್ರಹವು ಶುಕ್ರ ಮತ್ತು ಶನಿಗ್ರಹಗಳ ಸ್ವಲ್ಪ ಮೇಲೆ ಹಾಗೂ ಯುರೇನಸ್ ಗ್ರಹವು ಗುರು ಗ್ರಹದ ಸ್ವಲ್ಪ ಮೇಲ್ಭಾಗದಲ್ಲಿ ದೂರ ದರ್ಶಕದ ಸಹಾಯ ಕೋರಿ ವೀಕ್ಷಿಸಬಹುದು.

ರಾತ್ರಿ ಆಕಾಶದಲ್ಲಿ ತಪ್ಪಿಸಿಕೊಳ್ಳುವ ಏಕೈಕ ಗ್ರಹ ಬುಧ. ಇದು ಸೂರ್ಯನಿಗೆ ಅತಿ ಸಮೀಪದಲ್ಲಿದ್ದು ಸೂರ್ಯೋದಯಕ್ಕೆ 45 ನಿಮಿಷ ಮುಂಚಿತವಾಗಿ ಸೂರ್ಯನ ಪ್ರಭೆಯಲ್ಲಿ ಪ್ರಯಾಸ ಪಟ್ಟು ವೀಕ್ಷಣೆ ಮಾಡಿ. ಇದನ್ನು ಸಂಜೆಯ ಆಕಾಶದಲ್ಲಿ ನೋಡ ಬಯಸುವರು ಮುಂದಿನ ತಿಂಗಳು ಅಂದರೆ ಫೆಬ್ರವರಿ 22 ರಂದು ಸೂರ್ಯಾಸ್ತವಾದ 40 ನಿಮಿಷದ ಅಂತರದಲ್ಲಿ ಶನಿ ಗ್ರಹದ ಸ್ವಲ್ಪ ಕೆಳಭಾಗದಲ್ಲಿ ಹಾಗೂ 24 ರಂದು ಶನಿ ಗ್ರಹದ ಮೇಲ್ಭಾಗದಲ್ಲಿ ವೀಕ್ಷಿಸಬಹುದು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ದಾವಣಗೆರೆ ವತಿಯಿಂದ ದಾವಣಗೆರೆ ಹೊರ ವಲಯದಲ್ಲಿರುವ ಶಿರಮಗೊಂಡನಹಳ್ಳಿಯ ಅನ್‌ಮೋಲ್ ಪಬ್ಲಿಕ್ ಶಾಲೆಯ ಸಹಯೋಗದಲ್ಲಿ ಇದೇ ಜ.25ರ ಶನಿವಾರ ಸಂಜೆ 7 ಗಂಟೆಯಿಂದ ಖಗೋಳತಜ್ಞರು ಹಾಗೂ ನಿವೃತ್ತ ಮುಖ್ಯ ಗುರುಗಳಾದ ಎಂ.ಟಿ. ಶರಣಪ್ಪ ಟೆಲಿಸ್ಕೋಪ್ ಮೂಲಕ ನೇರ ವೀಕ್ಷಕ ವಿವರಣೆಯೊಂದಿಗೆ ಗ್ರಹಗಳ ಮೆರವಣಿಗೆಯ ವಿವರ ನೀಡಲಿದ್ದಾರೆ. ಆಸಕ್ತರು ಭಾಗವಹಿಸಿ, ಕಣ್ತುಂಬಿಕೊಳ್ಳಬಹುದಾಗಿದೆ.

ಮಾಹಿತಿಗಾಗಿ ಎಂ.ಟಿ.ಶರಣಪ್ಪ, 94803 43266, ಎಂ. ಗುರುಸಿದ್ಧಸ್ವಾಮಿ, 98805 31823, ಕೊಟ್ರೇಶ್ ಅನಮೋಲ್ 98448 79904 ಇವರನ್ನು ಸಂಪರ್ಕಿಸಬಹುದಾಗಿದೆ.

## ವಿದ್ಯಾರ್ಥಿಗಳನ್ನು ತಲುಪಲಿ 'ಖಗೋಳ ಕೌತುಕ'

ಇಂತಹದ್ದೊಂದು ಅಪರೂಪದ ಖಗೋಳ ಕೌತುಕ ವಿದ್ಯಾರ್ಥಿಗಳನ್ನು ತಲುಪಬೇಕಿದೆ. ಈ ಹಿನ್ನೆಲೆಯಲ್ಲಿ ಶಾಲಾ-ಕಾಲೇಜುಗಳಲ್ಲಿ ಟೆಲಿಸ್ಕೋಪ್ ಮೂಲಕ ವಿದ್ಯಾರ್ಥಿಗಳಿಗೆ ತೋರಿಸುವ ಕೆಲಸಕ್ಕೆ ಮುಂದಾಗಬೇಕಿದೆ ಎಂಬುದು ಪೋಷಕರ ಒತ್ತಾಯವಾಗಿದೆ. ದಾವಣಗೆರೆಯಂತಹ ಮಹಾನಗರಗಳಲ್ಲಿ ಶಾಲಾ-ಕಾಲೇಜುಗಳಲ್ಲಿ ಲಕ್ಷ ಲಕ್ಷ ಡೊನೇಷನ್ ಪಡೆಯಲಾಗುತ್ತದೆ. ಅಂತಹ ಸಂಸ್ಥೆಗಳು ತಮ್ಮ ವಿದ್ಯಾರ್ಥಿಗಳಿಗೆ ಇಂತಹ ವಿಸ್ಮಯದಿಂದ ವಂಚಿತರನ್ನಾಗಿ ಮಾಡಬಾರದು. ಜಿಲ್ಲಾಡಳಿತವೂ ಸಹ ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ, ಶಾಲಾ-ಕಾಲೇಜುಗಳ ಮುಖ್ಯಸ್ಥರಿಗೆ ಸೂಕ್ತ ನಿರ್ದೇಶನ ನೀಡಿ, ಈ ಅಪರೂಪದ ಘಟನೆಯನ್ನು ಮಕ್ಕಳಿಗೆ ತಲುಪಿಸಲು ಕ್ರಮ ಕೈಗೊಳ್ಳಬೇಕೆಂದು ಪೋಷಕರು ಒತ್ತಾಯಿಸಿದ್ದಾರೆ.

# ಮುಡಾ: ಸಿಎಂಗೆ ಕ್ಲೀನ್ ಚಿಟ್ ?

**(3ನೇ ಪುಟದಿಂದ)** ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕೆಂದು ಪೀಠ ಆದೇಶ ಮಾಡಿತ್ತು. ನ್ಯಾಯಾಲಯದ ಆದೇಶದಂತೆ ಮೈಸೂರು ಲೋಕಾಯುಕ್ತ ಎಸ್‌ಪಿ ಅವರು, ಇಲ್ಲಿಯವರೆಗಿನ ತನಿಖಾ ವರದಿಯನ್ನು ಕೇಂದ್ರ ಕಚೇರಿಗೆ ತಲುಪಿಸಿದ್ದಾರೆ.

ಉನ್ನತ ಮೂಲಗಳ ಪ್ರಕಾರ 14 ಬಿಡಿ ನಿವೇಶನಗಳ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲವೇ, ಅವರ ಪತ್ನಿ ಪಾರ್ವತಿ ಅವರಾಗಲೀ ಯಾವುದೇ ಹಸ್ತಕ್ಷೇಪ ಮಾಡಿಲ್ಲ ಎಂದು ತನಿಖಾ ವರದಿಯಲ್ಲಿ ಕ್ಲೀನ್ ಚಿಟ್ ನೀಡಿದ್ದಾರಂತೆ. ನಿವೇಶನಗಳ ಹಂಚಿಕೆಯಲ್ಲಿ ಮುಡಾ ಅಧಿಕಾರಿಗಳು ಪ್ರಾಧಿಕಾರದ ನಿಯಮಾವಳಿಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ, ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ದಾವೆ ಹೂಡಬೇಕೇ, ಇಲ್ಲವೇ, ಇಲಾಖಾ ತನಿಖೆ ನಡೆಸಬೇಕೆ ಅಥವಾ ಕಣ್ತಪ್ಪಿನಿಂದ ಇದಾಗಿದೆಯೇ, ನಾವು ಮುಂದೆ ಏನು ಕ್ರಮ ಕೈಗೊಳ್ಳಬೇಕು ಎಂದು ಇಲಾಖೆಯ ಕಾನೂನು ವಿಭಾಗವನ್ನು ತನಿಖಾಧಿಕಾರಿಗಳು ಕೋರಿದ್ದಾರೆ. ಕಾನೂನು ವಿಭಾಗ ನೀಡುವ ಸಲಹೆ ಆಧರಿಸಿ, ಇಲಾಖಾ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ಲೋಕಾಯುಕ್ತ ಪೊಲೀಸರು ತೀರ್ಮಾನಿಸಿದ್ದಾರೆ.

ಲೋಕಾಯುಕ್ತ ಎಸ್‌ಪಿ ಅವರು ಈ ಹಿಂದೆ ನೀಡಿದ್ದ ಸ್ಟೇಟಸ್ ರಿಪೋರ್ಟ್ ಹಾಗೂ ಈಗ ಸಲ್ಲಿಸಿರುವ ವರದಿಯಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹಸ್ತಕ್ಷೇಪ ಮಾಡಿರುವುದಕ್ಕೆ ಎಲ್ಲಿಯೂ ದಾಖಲೆಗಳಿಲ್ಲ, ಅವರ ಪಾತ್ರ ಇದೆ ಎಂಬುದು ಎಲ್ಲಿಯೂ ತನಿಖೆಯಿಂದ ಕಂಡುಬಂದಿಲ್ಲ ಎಂದು ಉಲ್ಲೇಖಿಸಿದ್ದಾರೆ.

ನಿವೇಶನ ಹಂಚಿಕೆ ಪ್ರಕರಣವನ್ನು ಮೂರು ಭಾಗಗಳಾಗಿ ವಿಂಗಡಿಸಿ ತನಿಖೆ ನಡೆಸಲಾಗಿದೆ.

ವಿವಾದಿತ ಜಮೀನು ಡಿ-ನೋಟಿಫೈಗೆ ಮೊದಲು ದೇವರಾಜು ತಂದೆಯಿಂದ ದೇವರಾಜು ಸಹೋದರನಿಗೆ ನಂತರ ದೇವರಾಜುಗೆ ಬಂದಿತ್ತು, ಆದರೆ, ಜಮೀನುಗಳನ್ನು ಕುಟುಂಬಸ್ಥರೇ ವರ್ಗಾವಣೆ ಮಾಡಿಕೊಂಡಿದ್ದರು, ಜಮೀನು ಮಾಲೀಕತ್ವ ವರ್ಗಾವಣೆ ಬಗ್ಗೆ ಸರ್ಕಾರಿ ದಾಖಲೆಯಲ್ಲಿ ನಮೂದಿಸದೇ ಇರುವುದು ಅವರ ಕುಟುಂಬಸ್ಥರು ಮಾಡಿದ್ದ ನಿರ್ಲಕ್ಷ್ಯ ಎಂಬ ಮಾಹಿತಿ ನೀಡಿದ್ದಾರೆ.

ದೇವರಾಜು ತನಗೆ ಬಂದ ಕೃಷಿ ಭೂಮಿಯನ್ನು ಮಲ್ಲಿಕಾರ್ಜುನಸ್ವಾಮಿ ಎಂಬುವರಿಗೆ ಮಾರಾಟ ಮಾಡಿದ್ದರು, ಅವರು ಜಮೀನನ್ನು ಭೂ ಪರಿವರ್ತನೆ ಮಾಡಿಸಿಕೊಂಡಿರುತ್ತಾರೆ.

ಮುಡಾ ಹಾಗೂ ಜಿಲ್ಲಾಧಿಕಾರಿ ಕಚೇರಿ ಅಧಿಕಾರಿಗಳು ಭೂ ಪರಿವರ್ತನೆ ಬಗ್ಗೆ ಸರಿಯಾದ ಪರಿಶೀಲನೆ ಮಾಡಿಲ್ಲ, ಪರಿಶೀಲನೆ ನಡೆಸದೇ ಭೂ ಪರಿವರ್ತನೆ ಮಾಡಿದ್ದಾರೆ.

ಭೂ ಪರಿವರ್ತನೆಯಲ್ಲಿ ಮುಖ್ಯಮಂತ್ರಿ ಕುಟುಂಬ ಹಸ್ತಕ್ಷೇಪವಿಲ್ಲ ಅನ್ನೋದು ಸ್ಪಷ್ಟವಾಗಿದೆ, ಮಲ್ಲಿಕಾರ್ಜುನಸ್ವಾಮಿ ಮಾರಾಟ ಮಾಡಿದ ಮೇಲೆ ಅವರ ಕುಟುಂಬಕ್ಕೆ ಭೂಮಿ ಬಂತು.

ಮೈಸೂರು ನಗರದ ಪ್ರತಿಷ್ಠಿತ ಬಡಾವಣೆಯಲ್ಲಿ 50:50ರ ಅನುಪಾತದಲ್ಲಿ 14 ಬಿಡಿ ನಿವೇಶನಗಳನ್ನು ಮುಖ್ಯಮಂತ್ರಿ ಅವರ ಕುಟುಂಬಕ್ಕೆ ನೀಡಿ ಮುಡಾ ಅಧಿಕಾರಿಗಳು ತಪ್ಪು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ.

ಇಂತಹ ಅಧಿಕಾರಿಗಳ ವಿರುದ್ಧ ಯಾವ ರೀತಿ ಕಾನೂನು ಕ್ರಮ ಜರುಗಿಸಬೇಕೆಂದು ಇಲಾಖಾ ಮೊರೆ ಹೋಗಿದ್ದಾರೆ.

# ಮಲೇಬೆನ್ನೂರಿನಲ್ಲಿ 27ಕ್ಕೆ 'ಜನತಾ ಅದಾಲತ್'



ದಾವಣಗೆರೆ, ಜ. 23- ಸ್ವಾಭಿಮಾನಿ ಬಳಗದ ವತಿಯಿಂದ ಇದೇ ದಿನಾಂಕ 27 ರಂದು ಬೆಳಿಗ್ಗೆ 10 ಕ್ಕೆ ಹರಿಹರ ತಾಲ್ಲೂಕಿನ ಮಲೇಬೆನ್ನೂರಿನಲ್ಲಿ ಸಾರ್ವಜನಿಕ ಜನತಾ ಅದಾಲತ್ ಹಮ್ಮಿಕೊಳ್ಳ ಲಾಗಿದೆ ಎಂದು ಸ್ವಾಭಿಮಾನಿ ಬಳಗದ ಸಂಸ್ಥಾಪಕ ರಾಜ್ಯಾಧ್ಯಕ್ಷ ಜಿ.ಬಿ. ವಿನಯ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಅದಾಲತ್ ಮೂಲಕ ಜನಾಭಿಪ್ರಾಯ ಸಂಗ್ರಹಿಸಿ, ಜನಪ್ರತಿನಿಧಿಗಳನ್ನು ಹಾಗೂ ಅಧಿಕಾರಿಗಳ ಕರ್ತವ್ಯವನ್ನು ನೆನಪಿಸಿ, ತ್ವರಿತಗತಿಯಲ್ಲಿ ರಸ್ತೆ ಅಗಲೀಕರಣಕ್ಕೆ ಚಾಲನೆ ನೀಡಿ, ಸಾರ್ವಜನಿಕರ ಆಶೋತ್ತರಗಳಿಗೆ ಸ್ಪಂದಿಸುವಂತೆ ತಾಲ್ಲೂಕು ಆಡಳಿತ ಮತ್ತು ಜಿಲ್ಲಾಡಳಿತಕ್ಕೆ ಮನವಿ ಮಾಡಲಾಗುವುದು ಎಂದು ಹೇಳಿದರು. ಹರಿಹರ ತಾಲ್ಲೂಕಿನಲ್ಲಿರುವ ಕೆರೆಗಳಿಗೆ ನೀರು ತುಂಬಿಸುವ, ಗ್ರಾಮೀಣ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಮರ್ಪಕ ಬಸ್ ಸೌಕರ್ಯ ಕಲ್ಪಿಸುವುದು ಸೇರಿದಂತೆ ರೈತರ, ವಿದ್ಯಾರ್ಥಿಗಳ, ಗ್ರಾಮೀಣ ಜನರ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸುವಂತೆ ಗಮನ ಸೆಳೆಯುವ ಕಾರ್ಯಕ್ರಮ ಇದಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸ್ವಾಭಿಮಾನಿ ಬಳಗದ ಪದಾಧಿಕಾರಿಗಳಾದ ಶಿವಕುಮಾರ್ ಡಿ.ಶೆಟ್ಟರ್, ವಿರೂಪಾಕ್ಷಪ್ಪ ಪಂಡಿತ್, ಮೊಹಮ್ಮದ್ ಸಾಧಿಕ್, ಎಸ್. ಚಂದ್ರಶೇಖರ್, ರಾಜು ಮೌರ್ಯ ಉಪಸ್ಥಿತರಿದ್ದರು.

# ಪುರಾಣ ಪ್ರವಚನದಲ್ಲಿ ಕಲಾವಿದರಿಗೆ ಸನ್ಮಾನ



ದಾವಣಗೆರೆ, ಜ.23- ಚೌಕಿಪೇಟೆಯ ಶ್ರೀ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಡೆಯುತ್ತಿರುವ ಒಂದು ತಿಂಗಳ ಪರ್ಯಂತದ ಪುರಾಣದಲ್ಲಿ ಮೈಸೂರಿನ ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರಾದ ಭೀಮಶಂಕರ ಬೀದೂರ್ ನೇತೃತ್ವದ 20 ಜನರ ತಂಡ ತಬಲಾ ಸೋಲೋ ನಡೆಸಿದರು.

ಇದೇ ಸಂದರ್ಭದಲ್ಲಿ ಭೀಮಶಂಕರ ಮತ್ತಿತರರನ್ನು ಸನ್ಮಾನಿಸಿ, ಗೌರವಿಸಲಾಯಿತು.

# ಭಿಕ್ಷುಕನಿಗೆ ಊಟ ನೀಡಿದ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲು

ಇಂದೋರ್, ಜ. 23- ಭಿಕ್ಷುಕನೋರ್ವನಿಗೆ ಆಹಾರ ನೀಡಿದ ಕಾರಣಕ್ಕಾಗಿ ಗುರುತಿಸಲಾಗದ ವ್ಯಕ್ತಿಯೊಬ್ಬನ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ ಘಟನೆ ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆದಿದೆ.

ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 223ರ ಅಡಿಯಲ್ಲಿ ಬನ್ವರ್‌ಕೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ಆರೋಪ ಸಾಬೀತಾದಲ್ಲಿ ಒಂದು ವರ್ಷದ ಜೈಲು ಇಲ್ಲವೇ 5 ಸಾವಿರ ರೂ. ದಂಡ ಇಲ್ಲವೇ ಎರಡನ್ನೂ ವಿಧಿಸಲಾಗುವುದು.

ಇಂದೋರ್ ಅನ್ನು ದೇಶದ ಮೊದಲ ಭಿಕ್ಷುಕ ಮುಕ್ತ ನಗರವನ್ನಾಗಿ ಮಾಡುವ ಗುರಿ ಹೊಂದಲಾಗಿದೆ. ಇದರ ಅನ್ವಯ ಭಿಕ್ಷುಕರಿಗೆ ಯಾವುದೇ ರೀತಿಯ ಆಹಾರ ಇತ್ಯಾದಿ ನೀಡುವುದನ್ನು ನಿಷೇಧಿಸಲಾಗಿದೆ. ಭಿಕ್ಷುಕರ ಕುರಿತು ಮಾಹಿತಿ ನೀಡಿದವರಿಗೆ ಸಾವಿರ ರೂ. ಬಹುಮಾನ ನೀಡುವುದಾಗಿ ಅಧಿಕಾರಿಗಳು ಘೋಷಿಸಿದ್ದರು. ಹಲವರು ಈ ಕುರಿತ ಮಾಹಿತಿ ನೀಡಿ ಬಹುಮಾನ ಪಡೆದಿದ್ದಾರೆ.

# ನಗರದಲ್ಲಿ ಇಂದು ಉದ್ಯೋಗ ಮೇಳ

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಾದರಿ ವೃತ್ತಿ ಕೇಂದ್ರ ಇವರ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದು ಉದ್ಯೋಗಾಧಿಕಾರಿ ಡಿ. ರವೀಂದ್ರ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 7483808321.

# ನಾಳೆ ಶೋಷಿತ ಸಮುದಾಯಗಳ ಸಭೆ

ದಾವಣಗೆರೆ, ಜ. 23 - ಬೈಪಾಸ್ ರಸ್ತೆ, ವಿದ್ಯಾನಗರದ ಸಮೃದ್ಧಿ ಫಂಕ್ಷನ್ ಹಾಲ್‌ನಲ್ಲಿ ನಾಡಿದ್ದು ದಿನಾಂಕ 25ರಂದು ಜಿಲ್ಲಾ ಹಿಂದುಳಿದ ಶೋಷಿತಾ ವರ್ಗ ಸಮು ದಾಯಗಳ ಸಭೆ ಕರೆಯಲಾಗಿದ್ದು, ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಸವಿತಾ ಸಮಾಜದ ಪದಾಧಿಕಾರಿಗಳು ಸದಸ್ಯರು ಭಾಗವಹಿಸಬೇಕಾಗಿ ವಕೀಲ ಎಂ. ರಂಗಸ್ವಾಮಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿವೇಕಾನಂದ ಜಯಂತಿ

ಯುವ ವನಿತಾ ಸಮಾಜದ ವತಿಯಿಂದ ನಿಜಲಿಂಗಪ್ಪ ಲೇಔಟ್‌ನಲ್ಲಿರುವ ಎಆರ್‌ಎಂ ಕಾಲೇಜಿನಲ್ಲಿ ಇಂದು ಮಧ್ಯಾಹ್ನ 12ಕ್ಕೆ ಸ್ವಾಮಿ ವಿವೇಕಾನಂದರ ಜಯಂತಿ ಆಚರಿಸಲಾಗುವುದು.

ಪ್ರಾಧ್ಯಾಪಕರಾದ ಲತಿಕಾ ಡಿ. ಶೆಟ್ಟಿ, ಕಾಲೇಜಿನ ಪ್ರಾಚಾರ್ಯ ಎಂ.ಡಿ. ಅಣ್ಣಯ್ಯ, ಪದ್ಮಾ ಪ್ರಕಾಶ್, ಸೌಮ್ಯ ಸತೀಶ್ ಧಾರವಾಡ, ಅಭಿಲಾಷ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.


## ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.ದಾವಣಗೆರೆ.



ಮಾನ್ಯ ಮತದಾರರೇ, ದಿನಾಂಕ : 24.01.2025ನೇ ಶುಕ್ರವಾರ ಬೆಳಿಗ್ಗೆ 9 ರಿಂದ ಸಂಜೆ 4ರವರೆಗೆ 5 ವರ್ಷಗಳ ಅವಧಿಗೆ ನಡೆಯಲಿರುವ ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪ್ ಸೊ.ಲಿ., ದಾವಣಗೆರೆ ಇದರ ಆಡಳಿತ ಮಂಡಳಿ ಸದಸ್ಯರ ಚುನಾವಣೆಗೆ **ಬಿ.ಸಿ. ಶಿವಲಿಂಗಪ್ಪ** ಆದ ನಾನು ಅಭ್ಯರ್ಥಿಯಾಗಿ ಸ್ಪರ್ಧಿಸಿರುತ್ತೇನೆ. ನನ್ನ ಗುರುತು '**ಡಿಶ್ ಎಂಟಿನಾ**' ಗುರುತಿಗೆ ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡಿ ನನ್ನನ್ನು ಜಯಶೀಲರನ್ನಾಗಿ ಮಾಡಿ ತಮ್ಮಗಳ ಸೇವೆ ಮತ್ತು ಬ್ಯಾಂಕ್ ಅಭಿವೃದ್ಧಿ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಸವಿನಯ ಪ್ರಾರ್ಥನೆ.

| ಕ್ರ.ಸಂ. | ನನ್ನ ಹೆಸರು | ಚಿನ್ಹೆ | ಗುರುತು |
|---|---|---|---|
| 09 | ಬಿ.ಸಿ. ಶಿವಲಿಂಗಪ್ಪ | | |

## ದಾವಣಗೆರೆ ಮತ್ತು ಹರಿಹರ ವಿಭಾಗೀಯ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ ಪತ್ತಿನ ಸಹಕಾರ ಸಂಘ ನಿ.,

ದಾವಣಗೆರೆ, ದಾವಣಗೆರೆ ತಾಲ್ಲೂಕು.

ಸ್ಥಾಪನೆ : 04.11.1991

ರಿ. ನಂ.: ಡಿಆರ್‌ಡಿ/ಆರ್.ಎಸ್.ಆರ್.9708/91-92

**ಚುನಾವಣೆ ನೋಟೀಸ್**

ಸದರಿ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯು ದಿನಾಂಕ 08.02.2025ರ ಶನಿವಾರದಂದು ಸಂಘದ ಕಛೇರಿಯಲ್ಲಿ ನಡೆಯಲಿದ್ದು,

| | | |
|---|---|---|
| 01 | ನಾಮಪತ್ರ ಸಲ್ಲಿಸಲು ಪ್ರಾರಂಭ ದಿನಾಂಕ | 24.01.2025ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 3ಗಂಟೆಯವರೆಗೆ |
| 02 | ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ | 31.01.2025ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 3ಗಂಟೆಯವರೆಗೆ |
| 03 | ನಾಮಪತ್ರ ಪರಿಶೀಲನೆ ದಿನಾಂಕ | 01.02.2025ರ ಬೆಳಿಗ್ಗೆ 11 ಗಂಟೆಗೆ |
| 04 | ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನಾಂಕ | 02.02.2025ರ ಮಧ್ಯಾಹ್ನ 3 ಗಂಟೆಯವಳಗೆ |
| 05 | ಮತದಾನ | 08.02.2025ರಂದು ಬೆಳಿಗ್ಗೆ 9 ರಿಂದ ಸಂಜೆ 4ರವರೆಗೆ |

ಹೆಚ್ಚಿನ ಮಾಹಿತಿಗಾಗಿ ರಿಟರ್ನಿಂಗ್ ಅಧಿಕಾರಿಗಳು ಹಾಗೂ ಸಂಘದ ಕಾರ್ಯದರ್ಶಿಯವರನ್ನು ಸಂಪರ್ಕಿಸಲು ಕೋರಿದೆ.

(ಮಧು ಶ್ರೀನಿವಾಸ ಟಿ) ರಿಟರ್ನಿಂಗ್ ಅಧಿಕಾರಿ,
ದಾವಣಗೆರೆ ಮತ್ತು ಹರಿಹರ ವಿಭಾಗೀಯ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ ಪತ್ತಿನ ಸಹಕಾರ ಸಂಘ ನಿ., ದಾವಣಗೆರೆ, ದಾವಣಗೆರೆ ತಾಲ್ಲೂಕು ಹಾಗೂ ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ.

## ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ-ಆಪ್. ಸೊಸೈಟಿ ಲಿ.,

#701/1 ಎ, 1ನೇ ಮುಖ್ಯರಸ್ತೆ, 10ನೇ ಕ್ರಾಸ್, ಬಳ್ಳಾರಿ ಸಿದ್ದಮ್ಮ ಪಾರ್ಕ್ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ. ಫೋ. : 08192-259693

ವಿವಿಧ ಠೇವಣಿಗಳ ಮೇಲೆ ಆಕರ್ಷಣೀಯವಾದ ಬಡ್ಡಿ ದರಗಳು

**ನಿಶ್ಚಿತ ಠೇವಣಿ**

| ಅವಧಿಗಳು | ಸಾಮಾನ್ಯರಿಗೆ | ಹಿರಿಯ ನಾಗರಿಕರಿಗೆ |
|---|---|---|
| 1. 46 ದಿನಗಳಿಂದ 60 ದಿವಸಗಳವರೆಗೆ | 5.50% | 6.00% |
| 2. 61 ದಿವಸಗಳಿಂದ 180 ದಿವಸಗಳವರೆಗೆ | 6.50% | 7.00% |
| 3. 181 ದಿವಸಗಳಿಂದ 1 ವರ್ಷಕ್ಕೆ | 7.50% | 8.00% |
| 4. 1 ವರ್ಷದಿಂದ 2 ವರ್ಷಕ್ಕೆ | 9.25% | 9.75% |
| 5. 2 ವರ್ಷದಿಂದ 3 ವರ್ಷಕ್ಕೆ | 9.75% | 10.25% |
| 6. 3 ವರ್ಷದಿಂದ 4 ವರ್ಷಕ್ಕೆ | 9.25% | 9.75% |

ಅಕ್ಷಯ ರೀ ಇನ್ವೆಸ್ಟ್‌ಮೆಂಟ್ ಠೇವಣಿಯಲ್ಲಿ ನಿಮ್ಮ ಹಣವನ್ನು ತೊಡಗಿಸಿದರೆ 87 ತಿಂಗಳಲ್ಲಿ ದ್ವಿಗುಣಗೊಳ್ಳುತ್ತದೆ. ರಿಕರಿಂಗ್ ಡಿಪಾಸಿಟ್ (ಆರ್.ಡಿ.) ಖಾತೆ ಮೇಲೆ ಬಡ್ಡಿ ದರ

| | |
|---|---|
| 1 ವರ್ಷಕ್ಕೆ | 8.25% |
| 2 ವರ್ಷಕ್ಕೆ | 8.75% |
| 3 ವರ್ಷದಿಂದ 5 ವರ್ಷಕ್ಕೆ | 10.25% |

**ಯಶಸ್ವಿನಿ ಸಹಕಾರಿ ಆರೋಗ್ಯ ರಕ್ಷಣಾ ಯೋಜನೆ :**

2024-25ನೇ ಸಾಲಿಗೆ ಯಶಸ್ವಿನಿ ಸಹಕಾರಿ ಆರೋಗ್ಯ ರಕ್ಷಣಾ ಯೋಜನೆಯ ಅಡಿಯಲ್ಲಿ ನವೀಕರಿಸಲು/ನೋಂದಾಯಿಸಿಕೊಳ್ಳಲು ದಿನಾಂಕ : 31.01.2025 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸೊಸೈಟಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ.

ತ್ಯಾವಣಗಿ ವೀರಭದ್ರಸ್ವಾಮಿ, ಅಧ್ಯಕ್ಷರು — ಸಿ. ಪಂಚಾಕ್ಷರಯ್ಯ, ಉಪಾಧ್ಯಕ್ಷರು — ಐನಳ್ಳಿ ಮಠದ ನಾಗರಾಜಯ್ಯ, ಪ್ರಭಾರ ಕಾರ್ಯದರ್ಶಿ (78292 71401)

## ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ

"ಶಿವಗೌರಿ" ಮೊದಲನೇ ಮಹಡಿ, ಶ್ರೀ ಭೂತಚೌಡೇಶ್ವರಿ ದೇವಸ್ಥಾನದ ಪಕ್ಕ, ರಿಂಗ್ ರಸ್ತೆ, ಶಾಂತಿನಗರ, ದಾವಣಗೆರೆ-6. ಫೋ. : 08192 356058, 9844833876

**ನಮೂನೆ -12 ನಿಯಮ 14(3)ರ ಪ್ರಕಾರ**

**ಚುನಾವಣಾ ಸೂಚನೆ**

ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಚುನಾವಣಾಧಿಕಾರಿಗಳು, ಬೆಂಗಳೂರು ಪ್ರಾಂತ ಬೆಂಗಳೂರು, ಇವರ ಆದೇಶ ಸಂಖ್ಯೆ ಜೆಆರ್‌ಬಿ/ಚುನಾವಣೆ/ಸಿಆರ್-91/2024-25 ದಿನಾಂಕ : 23.10.2024ರನ್ವಯ ವಿಜಯನಗರ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ., ರಿಂಗ್ ರಸ್ತೆ, ಶಾಂತಿನಗರ, ದಾವಣಗೆರೆ ಈ ಸಂಘದ ಮುಂದಿನ 5 ವರ್ಷಗಳ ಅವಧಿಗೆ ಆಡಳಿತ ಮಂಡಲಿಗೆ ನಿರ್ದೇಶಕರನ್ನು ಆಯ್ಕೆ ಮಾಡಲು ಚುನಾವಣೆಯನ್ನು ದಿನಾಂಕ : 09.02.2025 ರಂದು ಭಾನುವಾರ ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಶ್ರೀ ಅಂಬಾಭವಾನಿ ಕಲ್ಯಾಣ ಮಂಟಪ, ದೇವರಾಜ್ ಅರಸ್ ಬಡಾವಣೆ, ಡಿ ಬ್ಲಾಕ್, ದಾವಣಗೆರೆ ಇಲ್ಲಿ ನಡೆಸಲಾಗುವುದೆಂದು ಚುನಾವಣಾ ನೋಟೀಸ್ ನೀಡಲಾಗಿದೆ.

*ಚುನಾಯಿಸ ಬೇಕಾದ ನಿರ್ದೇಶಕರ ಸಂಖ್ಯೆ - 13 ಇದರಲ್ಲಿ ಸಾಮಾನ್ಯ-07, ಪರಿಶಿಷ್ಟ ಜಾತಿ-01, ಪರಿಶಿಷ್ಟ ಪಂಗಡ-01, ಹಿಂದುಳಿದ ವರ್ಗ ಪ್ರವರ್ಗ ಎ-01, ಹಿಂದುಳಿದ ವರ್ಗ ಪ್ರವರ್ಗ ಬಿ-01. ಹಾಗೂ ಮಹಿಳೆಯರಿಗೆ-02 ಸ್ಥಾನಗಳು ಮೀಸಲಾಗಿರುತ್ತವೆ.*

**ಚುನಾವಣಾ ವೇಳಾಪಟ್ಟಿ**

| ಕ್ರ.ಸಂ. | ಚುನಾವಣಾ ಕಾರ್ಯಸೂಚಿ | ದಿನಾಂಕ, ವಾರ, ಸಮಯ | ನಿಯಮ | ವಿವರ ಮತ್ತು ಸ್ಥಳ |
|---|---|---|---|---|
| 01 | ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸ್ವೀಕರಿಸಲು ಪ್ರಾರಂಭದ ದಿನಾಂಕ ಮತ್ತು ಕೊನೆಯ ದಿನಾಂಕ. | ಪ್ರಾರಂಭದ ದಿ. : 25.01.2025ನೇ ಶನಿವಾರದಿಂದ ದಿ. 01.02.2025ರ ಶನಿವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ | 14(ಎ) | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿ/ ಸಹಾಯಕ ಸಿಬ್ಬಂದಿಯವರಿಗೆ. |
| 02. | ಚುನಾವಣಾಧಿಕಾರಿಗಳಿಂದ ನಾಮಪತ್ರಗಳ ಪರಿಶೀಲನೆ. | ದಿ. : 02.02.2025ನೇ ಭಾನುವಾರ ಬೆಳಿಗ್ಗೆ 11.30 ಗಂಟೆಯಿಂದ. | 14 (ಬಿ) | ಸಂಘದ ಕಛೇರಿಯಲ್ಲಿ. |
| 03. | ಚುನಾವಣಾಧಿಕಾರಿಗಳಿಂದ ಕ್ರಮ ಬದ್ಧವಾಗಿ ನಾಮನಿರ್ದೇಶನಗೊಂಡ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ. | ದಿ. : 02.02.2025ನೇ ಭಾನುವಾರ ನಾಮಪತ್ರಗಳ ಪರಿಶೀಲನೆ ನಂತರ. | 14ಬಿ(4) | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ. |
| 04. | ಸ್ಪರ್ಧಿಸಿರುವ ಅಭ್ಯರ್ಥಿಗಳಿಂದ ನಾಮ ಪತ್ರ ವಾಪಸ್ಸು ಪಡೆಯಲು ಕೊನೆಯ ದಿನಾಂಕ. | ದಿ. : 03.02.2025ನೇಸೋಮವಾರ ಮಧ್ಯಾಹ್ನ 3.00 ಗಂಟೆಯೊಳಗೆ. | 14 (ಸಿ) | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿ / ಸಹಾಯಕ ಸಿಬ್ಬಂದಿಯವರಿಗೆ. |
| 05. | ಚುನಾವಣಾಧಿಕಾರಿಗಳಿಂದ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿ ಉಳಿದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ. | ದಿ. : 03.02.2025ನೇ ಸೋಮವಾರ ಮಧ್ಯಾಹ್ನ 3.00 ಗಂಟೆಯ ನಂತರ. | 14 (ಡಿ) | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ. |
| 06. | ಚುನಾವಣಾಧಿಕಾರಿಗಳಿಂದ (ಅವಶ್ಯವಿದ್ದಲ್ಲಿ) ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ಹಂಚಿಕೆ ಮಾಡುವುದು. | ದಿ. : 03.02.2025ನೇ ಸೋಮವಾರ ಮಧ್ಯಾಹ್ನ 4.30ರ ಗಂಟೆಯ ನಂತರ. | 14 (ಇ) | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ. |
| 07. | ಸ್ಪರ್ಧಿಸುವ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣೆ ಚಿಹ್ನೆಯೊಂದಿಗೆ ಪ್ರಕಟಿಸುವುದು. | ದಿ. : 04.02.2025ನೇ ಮಂಗಳವಾರ ಮಧ್ಯಾಹ್ನ 1.00ಗಂಟೆಯ ನಂತರ. | 14 (ಇ) | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ. |
| 08. | ಮತದಾನದ ದಿನಾಂಕ ಮತ್ತು ಸಮಯ. | ದಿ.: 09.02.2025ನೇ ಭಾನುವಾರ ಬೆಳಿಗ್ಗೆ 9.00 ರಿಂದ 4.00 ಗಂಟೆಯವರೆಗೆ. | | ರಿಟರ್ನಿಂಗ್ ಅಧಿಕಾರಿ ಹಾಗೂ ಅವರಿಂದ ನೇಮಕಗೊಂಡ ಸಿಬ್ಬಂದಿ ವರ್ಗದವರಿಂದ ಶ್ರೀ ಅಂಬಾಭವಾನಿ ಕಲ್ಯಾಣ ಮಂಟಪ, ದೇವರಾಜ್ ಅರಸ್ ಬಡಾವಣೆ, ಡಿ ಬ್ಲಾಕ್, ದಾವಣಗೆರೆ. |
| 09. | ಮತಗಳ ಎಣಿಕೆ ದಿನಾಂಕ ಮತ್ತು ಸಮಯ. | ದಿ. : 09.02.2025ನೇ ಭಾನುವಾರ ಮತದಾನ ಮುಗಿದ ನಂತರ. | | ರಿಟರ್ನಿಂಗ್ ಅಧಿಕಾರಿ ಹಾಗೂ ಅವರಿಂದ ನೇಮಕಗೊಂಡ ಸಿಬ್ಬಂದಿ ವರ್ಗದವರಿಂದ ಶ್ರೀ ಅಂಬಾಭವಾನಿ ಕಲ್ಯಾಣ ಮಂಟಪ, ದೇವರಾಜ್ ಅರಸ್ ಬಡಾವಣೆ, ಡಿ ಬ್ಲಾಕ್, ದಾವಣಗೆರೆ. |
| 10. | ಚುನಾವಣಾಧಿಕಾರಿಗಳಿಂದ ಚುನಾವಣೆ ಫಲಿತಾಂಶ ಘೋಷಣೆ. | ದಿ. : 09.02.2025ನೇ ಭಾನುವಾರ ಮತ ಎಣಿಕೆ ಮುಗಿದ ನಂತರ. | | ರಿಟರ್ನಿಂಗ್ ಅಧಿಕಾರಿಗಳಿಂದದ ಶ್ರೀ ಅಂಬಾಭವಾನಿ ಕಲ್ಯಾಣ ಮಂಟಪ, ದೇವರಾಜ್ ಅರಸ್ ಬಡಾವಣೆ, ಡಿ ಬ್ಲಾಕ್, ದಾವಣಗೆರೆ. |

ಸ್ಥಳ: ದಾವಣಗೆರೆ
ದಿನಾಂಕ: 22.01.2025

ಸಹಿ/- (ಪಿ. ನಿವೇದಿತ)
ರಿಟರ್ನಿಂಗ್ ಅಧಿಕಾರಿ ವಿಜಯನಗರ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ., ಹಾಗೂ ಅಧೀಕ್ಷಕರು, ಸ.ಸಂ.ಸ.ನಿ. ಕಛೇರಿ, ದಾವಣಗೆರೆ.

## 10 ಕೋಟಿ ದಾಟಿದ ಮಹಾಕುಂಭ ಯಾತ್ರಿಗಳ ಸಂಖ್ಯೆ

ಮಹಾಕುಂಭ ನಗರ, ಜ. 23- ಇಲ್ಲಿ ನಡೆಯುತ್ತಿರುವ ಮಹಾಕುಂಭಕ್ಕೆ ಭೇಟಿ ನೀಡಿದ ಯಾತ್ರಿಗಳ ಸಂಖ್ಯೆ 10 ಕೋಟಿ ದಾಟಿದೆ ಎಂದು ಉತ್ತರ ಪ್ರದೇಶ ಸರ್ಕಾರ ತಿಳಿಸಿದೆ. ಗುರುವಾರ ಮಧ್ಯಾಹ್ನ 12 ಗಂಟೆಗೆ ಯಾತ್ರಿಗಳ ಸಂಖ್ಯೆ ಈ ಹಂತಕ್ಕೆ ತಲುಪಿದೆ ಎಂದು ಸರ್ಕಾರ ಹೇಳಿದೆ. ಜ. 13 ರಿಂದ ಮಹಾ ಕುಂಭಮೇಳ ಆರಂಭ ವಾಗಿದ್ದು, ಫೆ. 26 ರವರೆಗೆ ಮುಂದು ವರೆಯಲಿದೆ. ಪ್ರತಿದಿನ ಲಕ್ಷಾಂತರ ಭಕ್ತರು ಪವಿತ್ರ ಸ್ನಾನ ಮಾಡುತ್ತಿದ್ದಾರೆ. ಈ ವರ್ಷ ಮಹಾಕುಂಭ ಮೇಳಕ್ಕೆ 45 ಕೋಟಿ ಜನ ಭೇಟಿ ನೀಡಲಿದ್ದಾರೆ ಎಂದು ಉತ್ತರ ಪ್ರದೇಶ ಸರ್ಕಾರ ಅಂದಾಜಿಸಿತ್ತು.


**ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ. ದಾವಣಗೆರೆ.**

**ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ - 2025**



ಮಾನ್ಯ ಮತದಾರರೇ, ದಿನಾಂಕ : 24.01.2025ನೇ ಶುಕ್ರವಾರ ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ 5 ವರ್ಷಗಳ ಅವಧಿಗೆ ನಡೆಯಲಿರುವ ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪ್ ಸೊ.ಲಿ., ದಾವಣಗೆರೆ ಇದರ ಆಡಳಿತ ಮಂಡಳಿ ಸದಸ್ಯರ ಚುನಾವಣೆಗೆ ಎಸ್. ರಾಮಚಂದ್ರ ರೆಡ್ಡಿ ಇವರ ಮೊಮ್ಮಗನಾದ **ಎಸ್. ಮಧುಕೃಷ್ಣ** ಆದ ನಾನು ಅಭ್ಯರ್ಥಿಯಾಗಿ ಸ್ಪರ್ಧಿಸಿರುತ್ತೇನೆ. ನನ್ನ ಗುರುತು **'ನೀರಿನ ನಲ್ಲಿ'** ಗುರುತಿಗೆ ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡಿ ನನ್ನನ್ನು ಜಯಶೀಲನನ್ನಾಗಿ ಮಾಡಿ ತಮ್ಮಗಳ ಸೇವೆ ಮತ್ತು ಬ್ಯಾಂಕ್ ಅಭಿವೃದ್ಧಿ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಸವಿನಯ ಪ್ರಾರ್ಥನೆ.

| ಕ್ರ.ಸಂ. | ನನ್ನ ಹೆಸರು | ಚಿನ್ಹೆ | ಗುರುತು |
|---|---|---|---|
| 04 | ಎಸ್. ಮಧುಕೃಷ್ಣ | | |

ಈ ಮೇಲ್ಕಂಡ ಗುರುತಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡುವುದರ ಮೂಲಕ ನನ್ನನ್ನು ಜಯಶೀಲನನ್ನಾಗಿ ಮಾಡಬೇಕಾಗಿ ಪ್ರಾರ್ಥನೆ.

ಸ್ಥಳ : ಆಡಳಿತ ಕಛೇರಿ , ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಫ್ ಸೋಸೈಟಿ ಲಿ. 16ನೇ ಅಡ್ಡ ರಸ್ತೆ, 3ನೇ ಮುಖ್ಯರಸ್ತೆ, ಕೆಟಿಜೆ ನಗರ, ದಾವಣಗೆರೆ

ತಮ್ಮ ಸೇವಾಕಾಂಕ್ಷಿ,
ಎಸ್. ಮಧುಕೃಷ್ಣ s/o ಎಸ್. ಕೃಷ್ಣಾರೆಡ್ಡಿ


|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ಸಿಟಿ ಕೆಟಿಜೆ ನಗರ ವಾಸಿ
ಶ್ರೀ ಹೆಚ್.ಎಂ. ಬಸವರಾಜಯ್ಯ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 16.01.2025ನೇ ಗುರುವಾರ ಬೆಳಿಗ್ಗೆ 5.16ಕ್ಕೆ
ನಮ್ಮ ಪೂಜ್ಯ ತಂದೆಯವರಾದ
**ಶ್ರೀ ಹೆಚ್.ಎಂ. ವೀರಯ್ಯನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 24.01.2025ನೇ ಶುಕ್ರವಾರ ಬೆಳಿಗ್ಗೆ 8.30ಕ್ಕೆ ಮೃತರ ಸ್ವಗೃಹ, 16ನೇ ಕ್ರಾಸ್, 3ನೇ ಮೇನ್, ಕೆಟಿಜೆ ನಗರ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು :
ಶ್ರೀ ಹೆಚ್.ಎಂ. ಬಸವರಾಜಯ್ಯ ಮತ್ತು ಶ್ರೀ ಹೆಚ್.ಎಂ. ಮಂಜುನಾಥ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಹುಣಸೆಕಟ್ಟೆ ವಂಶಸ್ಥರು ಹಾಗೂ ಬಂಧು-ಮಿತ್ರರು. ಫೋ. : 9845513219, 9880900540

ವಿ.ಸೂ. : ಆತ್ಮೀಯರೇ ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


Aaraike Hospitals | HCG The Specialist in Cancer Care — adding life to years

HCG ಕ್ಯಾನ್ಸರ್ ಕೇರ್‌ನಿಂದ ನಮ್ಮ ಅನುಭವಿ ಆಂಕೊಲಾಜಿಸ್ಟ್ ಅನ್ನು ನಿಮ್ಮ ನಗರದಲ್ಲಿ ಭೇಟಿ ಮಾಡಿ

**ಆರೈಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್**



ವಿಳಾಸ
ಆರೈಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್
ಕ್ರೀಡಾಂಗಣದ ಎದುರು, ಹವಾಯಿ ರಸ್ತೆ.
ದಾವಣಗೆರೆ - 577001

ಭೇಟಿ ಸಮಯ
DATE : 25 Jan 2025, Saturday
TIME : 01:00 PM - 04:00 PM

Dr Basanth Mahadevappa
Consultant Liver Transplant Surgeon
HCG Cancer Centre, KR Road
Bangalore, Karnataka

For Appointment, Contact
7829434249

www.hcgoncology.com

AHMEDABAD | BENGALURU | BHAVNAGAR | CHENNAI | CUTTACK | HUBBALLI | INDORE | JAIPUR | KALABURAGI | KENYA | KOLKATA | MUMBAI | MYSORE | NAGPUR | NASHIK | ONGOLE | RAJKOT | RANCHI | SHIMOGA | VADODARA | VIJAYAWADA | VIZAG


|| ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ||

# ಆಲೂರು ಸಹೋದರರ ಸಪ್ತ ನಿವಾಸಗಳ ಗೃಹ ಪ್ರವೇಶದ ಆತ್ಮೀಯ ಆಮಂತ್ರಣ





ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ತರಳಬಾಳು ಜಗದ್ಗುರು
ಶ್ರೀ ಶ್ರೀ ಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ

ಪೂಜ್ಯ ಜಗದ್ಗುರುಗಳ ಆಗಮನ
ಶನಿವಾರ ಬೆಳಗ್ಗೆ 11 ಗಂಟೆಗೆ



**ಕುರ್ಕಿ ಬಸಜ್ಜರ ಶ್ರೀಮತಿ ಸಿದ್ದಮ್ಮ ಶ್ರೀ ಸಿದ್ದಬಸಪ್ಪನವರ ಮಕ್ಕಳು**
**ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ**
**ಶ್ರೀ ಮರುಳಸಿದ್ದೇಶ್ವರ ನಿಲಯಗಳ ಗೃಹ ಪ್ರವೇಶಕ್ಕೆ ಸರ್ವರಿಗೂ ಆದರದ ಸುಸ್ವಾಗತ**



ಶ್ರೀಮತಿ ತ್ರಿವೇಣಿ ಚನ್ನಬಸಪ್ಪ
ಮಾಜಿ ಅಧ್ಯಕ್ಷರು,
ಗ್ರಾಮ ಪಂಚಾಯ್ತಿ,
ಆಲೂರು



ಶ್ರೀ ಕೆ.ಎಸ್. ಚನ್ನಬಸಪ್ಪ
ಪಿಡಬ್ಲ್ಯೂಡಿ ಪ್ರಥಮ
ದರ್ಜೆ ಗುತ್ತಿಗೆದಾರರು, ಆಲೂರು
ಮೊ. 99005 85875

ದಿನಾಂಕ : 25.01.2025ರ ಶನಿವಾರ

ಸ್ಥಳ : 'ಶ್ರೀ ಮರುಳಸಿದ್ದೇಶ್ವರ ನಿಲಯಗಳು' ಆಲೂರು, ದಾವಣಗೆರೆ ತಾಲ್ಲೂಕು.

ಭೋಜನ : ಮಧ್ಯಾಹ್ನ 12.30ಕ್ಕೆ

ವಿ.ಸೂ : ಸರ್ವರಿಗೂ ಆಮಂತ್ರಣ ಕಳುಹಿಸಿದ್ದು, ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.

# ಶಾಮನೂರು ಬಿಂದಪ್ಪ ಚಿದಾನಂದಪ್ಪ ನಿಧನ



**ಶ್ರೀ ಬಿಂದಪ್ಪ ಚಿದಾನಂದಪ್ಪನವರು**
ಜನನ : 1-6-1945 ಮರಣ : 23-1-2025

ದಾವಣಗೆರೆ ಸಿಟಿ, ಶಾಮನೂರು ಶಿವ-ಪಾರ್ವತಿ ಬಡಾವಣೆ, 2ನೇ ಮೇನ್, 2ನೇ ಕ್ರಾಸ್ ವಾಸಿ

## ಶ್ರೀ ಬಿಂದಪ್ಪ ಚಿದಾನಂದಪ್ಪ

ಅವರು, ದಿನಾಂಕ 23.1.2025ರ ಗುರುವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.1.2025ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

- ಬಿಂದಪ್ಪ ಶ್ರೀಮತಿ ಸರ್ವಮಂಗಳಮ್ಮ ಚಿದಾನಂದಪ್ಪ
- ಬಿಂದಪ್ಪ ಶ್ರೀಮತಿ ಸುನೀತ ಮತ್ತು ಬಸವರಾಜಪ್ಪ ಬಿ.ಸಿ. (ರಾಜು) ಮತ್ತು ಮಕ್ಕಳು.
- ಬಿಂದಪ್ಪ ಶ್ರೀಮತಿ ಅಶ್ವಿನಿ ಮತ್ತು ಶ್ರೀ ಲಿಂಗರಾಜ್ ಬಿ.ಸಿ. ಮತ್ತು ಮಕ್ಕಳು
- ಬಿಂದಪ್ಪ ವಂಶಸ್ಥರು, ಶಾಮನೂರು ಹಾಗೂ ಬಂಧು-ಮಿತ್ರರು.

ಮೊ. 94800-24202, 97436-73901

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas